# ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ, ೨೦೦೯

## ವಿಷಯಸೂಚಿ


**ಅಧ್ಯಾಯ 1 : ಪ್ರಾರಂಭಿಕ**

**ಕಲಂಗಳು**

1. ಸಂಕ್ಷಿಪ್ತ ಶಿರೋನಾಮೆ, ವ್ಯಾಪ್ತಿ ಮತ್ತು ಪ್ರಾರಂಭ
2. ವ್ಯಾಖ್ಯೆಗಳು

**ಅಧ್ಯಾಯ 2 : ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು**

3. ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು
4. ಪ್ರಾಥಮಿಕ ಶಿಕ್ಷಣ ಪಡೆಯಲು ಪ್ರವೇಶ ಪಡೆದಿರದ ಅಥವಾ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರದ ಮಕ್ಕಳಿಗಿರುವ ವಿಶೇಷ ಉಪಬಂಧಗಳು
5. ಬೇರೆ ಶಾಲೆಗೆ ವರ್ಗಾವಣೆ ಪಡೆಯುವ ಹಕ್ಕು

**ಅಧ್ಯಾಯ 3 : ಸಮುಚಿತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಮತ್ತು ಪೋಷಕರ ಕರ್ತವ್ಯಗಳು**

6. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಗಿರುವ, ಶಾಲೆಯನ್ನು ಸ್ಥಾಪಿಸಬೇಕಾದಂತಹ ಕರ್ತವ್ಯ
7. ಆರ್ಥಿಕ ಹಾಗೂ ಇನ್ನಿತರ ಹೊಣೆಗಾರಿಕೆಗಳ ಹಂಚಿಕೆ
8. ಸಮುಚಿತ ಸರ್ಕಾರದ ಕರ್ತವ್ಯಗಳು
9. ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು
10. ಪೋಷಕರ ಮತ್ತು ಪಾಲಕರ ಕರ್ತವ್ಯ
11. ಸಮುಚಿತ ಸರ್ಕಾರ – ಶಾಲಾ–ಪೂರ್ವ ಶಿಕ್ಷಣ ಒದಗಿಸುವಿಕೆ

**ಅಧ್ಯಾಯ 4 – ಶಾಲೆಗಳ ಮತ್ತು ಶಿಕ್ಷಕರ ಜವಾಬ್ದಾರಿಗಳು**

12. ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವಲ್ಲಿ ಶಾಲೆಗಳ ಜವಾಬ್ದಾರಿಯ ವ್ಯಾಪ್ತಿ
13. ದಾಖಲಾತಿ ಸಂದರ್ಭದಲ್ಲಿ, ತಲಾಶುಲ್ಕ ಪಡೆಯದಿರುವುದು ಹಾಗೂ ಪರಿಶೋಧನಾ ಪ್ರಕ್ರಿಯೆಗಳನ್ನು ಅನುಸರಿಸದಿರುವುದು
14. ದಾಖಲಾತಿಗಾಗೆ ವಯಸ್ಸಿನ ರುಜುವಾತು
15. ದಾಖಲಾತಿ ನಿರಾಕರಿಸದಿರುವುದು
16. ಅನುತ್ತೀರ್ಣಗೊಳಿಸದಿರುವುದರ ಹಾಗೂ ಹೊರಗಟ್ಟುವುದರ ನಿಷೇಧ
17. ಮಗುವಿಗೆ ಮಾನಸಿಕ ಕಿರುಕುಳ ಮತ್ತು ದೈಹಿಕ ಶಿಕ್ಷೆ ನೀಡುವುದರ ನಿಷೇಧ
18. ಮನ್ನಣೆ ಪತ್ರವನ್ನು ಪಡೆಯದೆ ಶಾಲೆಗಳನ್ನು ಸ್ಥಾಪಿಸುವಂತಿಲ್ಲ
19. ಶಾಲೆಗಳಿಗೆ ಸೂಚಿಸಲಾದ ಗುಣಮಟ್ಟಗಳು ಮತ್ತು ಮಾನದಂಡಗಳು
20. ಅನುಸೂಚಿಯನ್ನು ತಿದ್ದುಪಡಿ ಮಾಡಬಹುದಾದ ಅಧಿಕಾರ
21. ಶಾಲಾ ನಿರ್ವಹಣಾ ಸಮಿತಿ
22. ಶಾಲಾಭಿವೃದ್ಧಿ ಯೋಜನೆ
23. ಶಿಕ್ಷಕರ ನೇಮಕಾತಿಗೆ ಇರಬೇಕಾದ ಅರ್ಹತೆ ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು
24. ಶಿಕ್ಷಕರ ಕರ್ತವ್ಯಗಳು ಮತ್ತು ಅಸಮಾಧಾನಗಳ ನಿವಾರಣೆ
25. ವಿದ್ಯಾರ್ಥಿ–ಶಿಕ್ಷಕ ಅನುಪಾತ
26. ತೆರವಾಗಿರುವ ಶಿಕ್ಷಕ ಹುದ್ದೆಗಳನ್ನು ಭರ್ತಿಗೊಳಿಸುವಿಕೆ
27. ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಶಿಕ್ಷಕರ ಅಭಿನಿಯೋಜನೆಯ ನಿಷೇಧ
28. ಶಿಕ್ಷಕರ ಖಾಸಗೀ ಪಾಠ ಹೇಳುವಿಕೆಯ ನಿಷೇಧ

**ಅಧ್ಯಾಯ 5 – ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಿಕೆ**

29. ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನ
30. ಪರೀಕ್ಷೆ ಮತ್ತು ಪೂರ್ಣಗೊಳಿಸುವಿಕೆಯ ಪ್ರಮಾಣ ಪತ್ರ

**ಅಧ್ಯಾಯ 6 – ಮಕ್ಕಳ ಹಕ್ಕು ರಕ್ಷಣೆ**

31. ಮಗುವಿನ ಶಿಕ್ಷಣದ ಹಕ್ಕಿನ ಮೇಲ್ವಿಚಾರಣೆ
32. ಅಸಮಾಧಾನ ಕಾರಣಗಳ ನಿವಾರಣೆ
33. ರಾಷ್ಟ್ರೀಯ ಸಲಹಾ ಮಂಡಳಿಯ ರಚನೆ
34. ರಾಜ್ಯ ಸಲಹಾ ಮಂಡಳಿಯ ರಚನೆ

**ಅಧ್ಯಾಯ 7 – ಇತರೆ ವಿಚಾರಗಳು**

35. ನಿರ್ದೇಶನಗಳನ್ನು ನೀಡುವ ಅಧಿಕಾರ
36. ಕಾನೂನು ಕ್ರಮ ಜರುಗಿಸಲು ಪೂರ್ವ ಮಂಜೂರಾತಿ
37. ಸದ್ಭಾವನೆಯಿಂದ ಕೈಗೊಂಡ ಕ್ರಮಗಳ ಸಂರಕ್ಷಣೆ
38. ನಿಯಮಗಳನ್ನು ರೂಪಿಸಲು ಸಮುಚಿತ ಸರ್ಕಾರಕ್ಕಿರುವ ಅಧಿಕಾರ

REGISTERED NO.DL (N) 04 / 0007 / 2003-09

ಭಾರತದ ರಾಜ್ಯಪತ್ರ The Gazette of India

ಅಸಾಧಾರಣ

ಭಾಗ 2 – ಖಂಡ 1

ಪ್ರಾಧಿಕಾರದಿಂದ ಪ್ರಕಟಿತ

ಕ್ರಮ ಸಂಖ್ಯೆ 39 ನವದೆಹಲಿ, ಗುರುವಾರ, ಆಗಸ್ಟ್ 27 2009/ಭಾದ್ರ 5, 1931

ಪ್ರತ್ಯೇಕ ಸಂಕಲನವಾಗಿ ದಾಖಲಿಸಲು ಅನುಕೂಲವಾಗುವಂತೆ, ಈ ಭಾಗಕ್ಕೆ ಪ್ರತ್ಯೇಕವಾದ ಪುಟಸಂಖ್ಯೆಯನ್ನು ನೀಡಲಾಗಿದೆ

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**

ನವದೆಹಲಿ, ಗುರುವಾರ, ಆಗಸ್ಟ್ 27 2009/ಭಾದ್ರ, 1931 (ಶಕ)

ಲೋಕಸಭೆಯ ಕೆಳಕಂಡ ಕಾಯ್ದೆಯು ರಾಷ್ಟ್ರಪತಿಗಳ ಮನ್ನಣೆಯನ್ನು 2009 ಆಗಸ್ಟ್ 26 ರಂದು ಪಡೆದಿದ್ದು, ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ.

# ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ, ೨೦೦೯

**2009 ರ ಕ್ರಮ ಸಂಖ್ಯೆ 35**

ಆರರಿಂದ ಹದಿನಾಲ್ಕು ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಕಾಯಿದೆ.

ಭಾರತ ಗಣರಾಜ್ಯದ 60 ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯಿದೆಯಾಗಿ ಈ ಮುಂದಿನಂತೆ ರಚಿಸಲಾಗಿದೆ.

## ಅಧ್ಯಾಯ – ೧
## ಪ್ರಾರಂಭಿಕ

### ಕಲಂ – 1 : ಸಂಕ್ಷಿಪ್ತ ಶಿರೋನಾಮೆ, ವ್ಯಾಪ್ತಿ ಮತ್ತು ಪ್ರಾರಂಭ

(1) ಈ ಕಾಯಿದೆಯನ್ನು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ ೨೦೦೯ ಎಂದು ಕರೆಯಬಹುದಾಗಿದೆ.

(2) ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಸಮಗ್ರ ಭಾರತ ದೇಶವು ಈ ಕಾಯಿದೆಯ ವ್ಯಾಪ್ತಿಗೊಳಪಡತಕ್ಕದ್ದು.

(3) ಈ ಕಾಯಿದೆಯು ಭಾರತ ಕೇಂದ್ರ ಸರ್ಕಾರವು ಅಧಿಕೃತ ರಾಜ್ಯ ಪತ್ರದಲ್ಲಿ ಘೋಷಿಸಿ ನಿಗದಿಪಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

### ಕಲಂ – 2 : ವ್ಯಾಖ್ಯೆಗಳು

ಈ ಕಾಯಿದೆಯಲ್ಲಿ, ಬೇರೊಂದು ಸಂದರ್ಭದಲ್ಲಿ ಅಗತ್ಯವೆನಿಸದಿದ್ದರೆ –

(a) "ಸಮುಚಿತ ಸರ್ಕಾರ[1]" ಎಂದರೆ,

(i) ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟ, ಕೇಂದ್ರ ಸರ್ಕಾರದ ಸ್ವಾಮ್ಯತ್ವದಲ್ಲಿರುವ ಅಥವಾ ಅಧೀನದಲ್ಲಿರುವ ಅಥವಾ ತನ್ನದೇ ಶಾಸನ ಸಭೆಯನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರರಿಂದ ಸ್ಥಾಪಿಸಲ್ಪಟ್ಟ, ಸ್ವಾಮ್ಯತ್ವಕ್ಕೆ ಅಥವಾ ನಿಯಂತ್ರಣಕ್ಕೊಳಪಟ್ಟ ಶಾಲೆಗಳಿಗೆ ಸಂಬಂಧಿಸಿದಂತೆ – ಕೇಂದ್ರ ಸರ್ಕಾರ;

[1] ಸಮುಚಿತ ಸರ್ಕಾರ ಎಂಬ ಶಬ್ದ ಪ್ರಯೋಗವು "Appropriate Government" ಎಂಬುದರ ಅನುವಾದವಾಗಿದ್ದು, ಹಲವಾರು ಕನ್ನಡ ಅನುವಾದಿತ ಕಾಯಿದೆಗಳಲ್ಲಿ ಇದನ್ನು ಬಳಸಲಾಗಿದೆ. ಇದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರವು ಡಿಸೆಂಬರ್ 2008 ರಲ್ಲಿ ಪ್ರಕಟಿಸಿದ ಕಾನೂನು ಪದಕೋಶದಿಂದ ಆರಿಸಿಕೊಳ್ಳಲಾಗಿದೆ.

(ii) ಉಪ ಕಲಂ (i) ರಲ್ಲಿ ಉಲ್ಲೇಖಿಸಲಾದ ಶಾಲೆಗಳನ್ನು ಹೊರತುಪಡಿಸಿ, ಇನ್ನುಳಿದ –

(A) ಯಾವುದೇ ರಾಜ್ಯದ ಆಡಳಿತಕ್ಕೆ ಸೇರಿರುವ ಪ್ರದೇಶದಲ್ಲಿ ಸ್ಥಾಪಿತವಾದ ಶಾಲೆಗಳಿಗೆ ಸಂಬಂಧಿಸಿದಂತೆ – ಆ ರಾಜ್ಯದ ಸರ್ಕಾರ;

(B) ತನ್ನದೇ ಆದ ಶಾಸನ ಸಭೆಯನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶದ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಶಾಲೆಗಳಿಗೆ ಸಂಬಂಧಿಸಿದಂತೆ – ಕೇಂದ್ರಾಡಳಿತ ಪ್ರದೇಶದ ಆ ಸರ್ಕಾರ.

(b) "ತಲಾ ಶುಲ್ಕ" (ಕ್ಯಾಪಿಟೇಶನ್ ಶುಲ್ಕ) ಎಂದರೆ, ಶಾಲೆಯು ನಿಗದಿಪಡಿಸಿದ ಶುಲ್ಕವನ್ನು ಹೊರತುಪಡಿಸಿ, ಪಾವತಿಸಬಹುದಾದ ಇನ್ನಾವುದೇ ತೆರನಾದ ದೇಣಿಗೆ ಅಥವಾ ಕೊಡುಗೆ ಅಥವಾ ಪಾವತಿ.

(c) "ಮಗು" ಎಂದರೆ ಆರರಿಂದ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಗಂಡು ಅಥವಾ ಹೆಣ್ಣು ಮಗು.

(d) "ಪ್ರತಿಕೂಲ ಗುಂಪಿಗೊಳಪಟ್ಟ ಮಗು" ಎಂದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಅಥವಾ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಾವಾರು, ಲಿಂಗಾಧಾರಿತ ಅಥವಾ ಸಮುಚಿತ ಸರ್ಕಾರ ಅಧಿಸೂಚನೆಯ ಮೂಲಕ ಸ್ಪಷ್ಟಪಡಿಸಿದ ಇನ್ನಾವುದೇ ಕಾರಣಗಳಿಂದಾಗಿ ಪ್ರತಿಕೂಲತೆಗೊಳಗಾಗಿರುವ ಇತರೆ ಗುಂಪಿಗೆ ಸೇರಿರುವ ಮಗು.

(e) "ದುರ್ಬಲ ವರ್ಗಕ್ಕೆ ಸೇರಿದ ಮಗು" ಎಂದರೆ, ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಸ್ಪಷ್ಟಪಡಿಸಿದ ಕನಿಷ್ಠ ವಾರ್ಷಿಕ ಆದಾಯ ಮಿತಿಗಿಂತಲೂ ಕಡಿಮೆ ವಾರ್ಷಿಕ ಆದಾಯವನ್ನು ಹೊಂದಿರುವ ಪೋಷಕರ ಯಾ ಪಾಲಕರ ಮಗು.

(f) "ಪ್ರಾಥಮಿಕ ಶಿಕ್ಷಣ" ಎಂದರೆ, ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗಿನ ಶಿಕ್ಷಣ.

(g) ಮಗುವಿಗೆ ಸಂಬಂಧಿಸಿದಂತೆ "ಪಾಲಕ" ಎಂದರೆ, ಆ ಮಗುವಿನ ಆರೈಕೆ ಹಾಗೂ ಸುಪರ್ದಿಯ ಹೊಣೆ ಹೊತ್ತಿರುವ ವ್ಯಕ್ತಿ ಮತ್ತು ಈ ವ್ಯಾಖ್ಯೆ ಸಹಜ ಪಾಲಕ ಅಥವಾ ನ್ಯಾಯಾಲಯವು ನಿಯೋಜಿಸಿದ ಅಥವಾ ಮಗುವಿನ ಸಂರಕ್ಷಕ (ಪಾಲಕ) ಎಂದು ನ್ಯಾಯಾಲಯ ಅಥವಾ ಕಾಯಿದೆ ಘೋಷಿಸಿದ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(h) "ಸ್ಥಳೀಯ ಪ್ರಾಧಿಕಾರ" ಎಂದರೆ, ಯಾವುದೇ ಹೆಸರಿನಿಂದ ಕರೆಯಬಹುದಾದ ಪುರಸಭೆ, ಪೌರ ಮಂಡಳಿ, ಜಿಲ್ಲಾ ಪರಿಷತ್, ನಗರ ಪಂಚಾಯತ್ ಅಥವಾ ಪಂಚಾಯತ್ ಹಾಗೂ ಈ ವ್ಯಾಖ್ಯೆ, ಒಂದು ಶಾಲೆಯ ಆಡಳಿತಾಧಿಕಾರದ ನಿಯಂತ್ರಣವನ್ನು ಹೊಂದಿರುವ ಅಥವಾ ಯಾವುದೇ ಪಟ್ಟಣ ಯಾ ಗ್ರಾಮಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಯಂತೆ ಕಾರ್ಯ ನಿರ್ವಹಿಸಲು ಯಾವುದೇ ಕಾಯಿದೆಯಡಿಯಲ್ಲಿ ಅಧಿಕಾರ ಪಡೆದಿರುವ ಇತರೆ ಪ್ರಾಧಿಕಾರ ಅಥವಾ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.

(i) "ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಆಯೋಗ" ಎಂದರೆ, ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆ 2005 ರ ಕಲಂ 3 ರಡಿಯಲ್ಲಿ ಸ್ಥಾಪಿಸಲಾದ ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿರುವ ರಾಷ್ಟ್ರೀಯ ಆಯೋಗವಾಗಿದೆ.

(j) "ಅಧಿಸೂಚನೆ ಅಥವಾ ಪ್ರಕಟಣೆ" ಎಂದರೆ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ.

(k) "ಪೋಷಕ" ಎಂದರೆ, ಮಗುವಿನ ಸಹಜ ಪೋಷಕ ಅಥವಾ ದತ್ತು ಸಂಬಂಧವನ್ನು ಹೊಂದಿರುವ ಅಥವಾ ಮಲ ತಂದೆತಾಯಿ.

(l) "ವಿಧಿಸಿದ ಅಥವಾ ನಿಯಮಿಸಿದ" ಎಂದರೆ, ಈ ಕಾಯಿದೆಯಡಿಯಲ್ಲಿನ ನಿಯಮಗಳ ಮೂಲಕ ವಿಧಿಸಿದ ಎಂದರ್ಥ.

(m) "ಅನುಸೂಚಿ" ಎಂದರೆ, ಈ ಕಾಯಿದೆಯೊಂದಿಗೆ ಅನುಬಂಧಿಸಲಾದ ವಿವರಪಟ್ಟಿ ಯಾ ಅನುಸೂಚಿ.

(n) "ಶಾಲೆ" ಎಂದರೆ, ಪ್ರಾಥಮಿಕ ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಅಂಗೀಕೃತ (ಮನ್ನಣೆ ಪಡೆದಿರುವ) ಶಾಲೆ. ಈ ವ್ಯಾಖ್ಯೆ ಕೆಳಕಂಡವುಗಳನ್ನೂ ಒಳಗೊಂಡಿರುತ್ತದೆ;

(i) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟಿರುವ, ಅದರ ಸ್ವಾಮ್ಯತ್ವಕ್ಕೊಳಪಟ್ಟಿರುವ ಅಥವಾ ನಿಯಂತ್ರಣಕ್ಕೊಳಪಟ್ಟಿರುವ ಶಾಲೆ;

(ii) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ, ತನ್ನ ಸಂಪೂರ್ಣ ಯಾ ಭಾಗಶಃ ಖರ್ಚುವೆಚ್ಚಗಳನ್ನು ಭರಿಸಲು ಅನುದಾನ ಅಥವಾ ದೇಣಿಗೆಯನ್ನು ಪಡೆಯುತ್ತಿರುವ ಅನುದಾನಿತ ಶಾಲೆ;

(iii) ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿರುವಂತಹ ಶಾಲೆ;

(iv) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ತನ್ನ ಖರ್ಚುವೆಚ್ಚಗಳನ್ನು ಭರಿಸಲು ಯಾವುದೇ ರೀತಿಯ ಸಹಾಯ ಅಥವಾ ದೇಣಿಗೆಯನ್ನು ಸ್ವೀಕರಿಸದಂತಹ ಅನುದಾನರಹಿತ ಶಾಲೆ.

(o) "ಪರಿಶೋಧನಾ ಪ್ರಕ್ರಿಯೆ" ಯಾದೃಚ್ಛಿಕ ಅಥವಾ ತನ್ನ ಇಷ್ಟಾನುಸಾರದ ಆಯ್ಕೆ ವಿಧಾನವನ್ನು ಹೊರತುಪಡಿಸಿ, ಮಕ್ಕಳನ್ನು ಶಾಲೆಗೆ ದಾಖಲಿಸಿಕೊಳ್ಳಲು ಆದ್ಯತೆಯ ಮೇರೆಗೆ ಆಯ್ಕೆ ಮಾಡಲು ಬಳಸುವ ವಿಧಾನ.

(p) ಒಂದು ಶಾಲೆಗೆ ಸಂಬಂಧಿಸಿದಂತೆ "ನಿರ್ದಿಷ್ಟ ವರ್ಗ" ಎಂದರೆ, ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ ಎಂದು ಕರೆಯಲ್ಪಡುವ ಹಾಗೂ ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಪ್ರತ್ಯೇಕವಾದ ಗುಣಲಕ್ಷಣಗಳಿರುವ ಇತರ ಯಾವುದೇ ಶಾಲೆ;

(q) "ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿ ರಾಜ್ಯ ಆಯೋಗ" ಎಂದರೆ, ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆ 2005 ರ ಕಲಂ 3 ರಡಿಯಲ್ಲಿ ಸ್ಥಾಪಿಸಲಾದ ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿರುವ ರಾಜ್ಯ ಆಯೋಗವಾಗಿದೆ.

## ಅಧ್ಯಾಯ – ೨
## ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು

**ಕಲಂ – 3 : ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು**

(1) ಆರರಿಂದ ಹದಿನಾಲ್ಕು ವರ್ಷದೊಳಗಿನ ವಯೋಮಿತಿಯ ಪ್ರತಿಯೊಂದು ಮಗುವೂ, ತಾನಿರುವ ಪ್ರದೇಶದ ಆಸುಪಾಸಿನ ಶಾಲೆಯಲ್ಲಿ, ಪ್ರಾಥಮಿಕ ಶಿಕ್ಷಣದ ಹಂತ ಪೂರ್ಣಗೊಳಿಸುವವರೆಗೂ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(2) ಉಪ ಕಲಂ 1 ರಲ್ಲಿ ವಿವರಿಸಲಾದ ಉದ್ದೇಶಕ್ಕಾಗಿ, ಯಾವುದೇ ಮಗುವು ಅವನು/ಳು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದನ್ನು ಅಥವಾ ಪೂರ್ಣಗೊಳಿಸುವುದನ್ನು ತಡೆಹಿಡಿಯಬಲ್ಲ ಯಾವುದೇ ವಿಧದ ಶುಲ್ಕ ಅಥವಾ ಖರ್ಚು ವೆಚ್ಚವನ್ನು ಭರಿಸಲು ಬಾಧ್ಯಸ್ಥನಾಗುವುದಿಲ್ಲ/ಳಾಗುವುದಿಲ್ಲ.

ಆದರೆ, ಅಶಕ್ತತೆಯನ್ನು ಹೊಂದಿರುವ ವ್ಯಕ್ತಿಗಳ (ಸಮಾನ ಅವಕಾಶಗಳು, ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆ 1996 ರ ಕಲಂ 2 ರ ಉಪ ಕಲಂ (1) ರಲ್ಲಿ ವಿವರಿಸಲಾದಂತಹ ಅಸಮರ್ಥತೆಯಿಂದ ಬಳಲುತ್ತಿರುವ ಮಗುವು ಆ ಕಾಯಿದೆಯ 5 ನೇ ಅಧ್ಯಾಯದಲ್ಲಿ ಕೊಡಲಾಗಿರುವ ಉಪಬಂಧ[2]ಗಳ ಅನುಸಾರವಾಗಿ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

**ಕಲಂ – 4 : ಪ್ರಾಥಮಿಕ ಶಿಕ್ಷಣ ಪಡೆಯಲು ಪ್ರವೇಶ ಪಡೆದಿರದ ಅಥವಾ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರದ ಮಕ್ಕಳಿಗಿರುವ ವಿಶೇಷ ಉಪಬಂಧಗಳು**

ಆರು ವರ್ಷ ಮೇಲ್ಪಟ್ಟ ಮಗುವೊಂದನ್ನು ಯಾವುದೇ ಶಾಲೆಗೆ ಸೇರಿಸದೇ ಇದ್ದಲ್ಲಿ ಅಥವಾ ಶಾಲೆಗೆ ಪ್ರವೇಶ ಪಡೆದಿದ್ದೂ ಸಹ ಪ್ರಾಥಮಿಕ ಶಿಕ್ಷಣವನ್ನು ಮಗುವು ಪೂರ್ತಿಗೊಳಿಸದೇ ಇದ್ದಲ್ಲಿ, ಅಂತಹ ಮಗುವನ್ನು ಅವನ/ಅವಳ ವಯೋಮಿತಿಗೆ ಸೂಕ್ತವಾದ ತರಗತಿಗೆ ಸೇರಿಸತಕ್ಕದ್ದು.

ಈ ರೀತಿಯಾಗಿ, ಮಗುವೊಂದು ತನ್ನ ವಯೋಮಿತಿಗನುಗುಣವಾದ ತರಗತಿಗೆ ನೇರವಾಗಿ ಪ್ರವೇಶ ಪಡೆದ ಸಂದರ್ಭದಲ್ಲಿ, ತರಗತಿಯ ಇನ್ನುಳಿದ ಮಕ್ಕಳೊಡನೆ ಸರಿಸಮಾನತೆ ಸಾಧಿಸಲು, ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದಂತಹ ರೀತಿ ಹಾಗೂ ಸಮಯಾವಧಿಯೊಳಗೆ ವಿಶೇಷ ತರಬೇತಿಯನ್ನು ಪಡೆಯುವ ಹಕ್ಕನ್ನು ಅವನು/ಅವಳು ಹೊಂದಿರತಕ್ಕದ್ದು.

ಹಾಗೂ, ಈ ರೀತಿಯಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಪ್ರವೇಶ ಗಳಿಸಿದ ಮಗು ಹದಿನಾಲ್ಕು ವರ್ಷಗಳ ಬಳಿಕವೂ, ತನ್ನ ಪ್ರಾಥಮಿಕ ಶಿಕ್ಷಣದ ಹಂತ ಪೂರ್ಣಗೊಳ್ಳುವ ತನಕ ಉಚಿತ ಶಿಕ್ಷಣವನ್ನು ಪಡೆಯಲು ಅರ್ಹವಾಗಿರತಕ್ಕದ್ದು.

---

[2] ಉಪಬಂಧ ಎಂದರೆ, ("Provision" ಎಂಬ ಪದದ ಅನುವಾದ) ಯಾವುದಕ್ಕಾದರೂ ಅವಕಾಶ ಒದಗಿಸಿರುವ ನ್ಯಾಯ ನಿಯಮ. ಈ ಪದದ ಅರ್ಥ ವಿವರಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ 1999 ರಲ್ಲಿ ಪ್ರಕಟಿಸಿದ ಇಂಗ್ಲೀಷ್–ಕನ್ನಡ ನಿಘಂಟಿನ ಪು.ಸಂ. 735 ರಿಂದ ತೆಗೆದುಕೊಳ್ಳಲಾಗಿದೆ.

**ಕಲಂ - 5 : ಬೇರೆ ಶಾಲೆಗೆ ವರ್ಗಾವಣೆ ಪಡೆಯುವ ಹಕ್ಕು**

(1) ಯಾವ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಸೌಲಭ್ಯ ಇರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಮಗುವು, ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು, ಈ ಕಾಯಿದೆಯ ಕಲಂ 2 ರ ಉಪಕಲಂ (n) ಅಡಿಯಲ್ಲಿ ನೀಡಲಾದ (iii) ಹಾಗೂ (iv) ರಲ್ಲಿ ನಮೂದಿಸಲಾದ ಶಾಲೆಗಳನ್ನು ಹೊರತುಪಡಿಸಿ, ಇತರ ಯಾವುದೇ ಶಾಲೆಗೆ ವರ್ಗಾವಣೆಯನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(2) ಬೇರೆ ಯಾವುದೇ ಕಾರಣಗಳಿಗಾಗಿ ಒಂದು ಮಗುವು ರಾಜ್ಯದೊಳಗೆ ಅಥವಾ ರಾಜ್ಯದ ಹೊರಗೆ ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ, ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಹೋಗಬೇಕಾದಂತಹ ಸಂದರ್ಭದಲ್ಲಿ, ಅವನು/ಳು ಈ ಕಾಯಿದೆಯ ಕಲಂ 2 ರ ಉಪಕಲಂ (n) ಅಡಿಯಲ್ಲಿ ನೀಡಲಾದ (iii) ಹಾಗೂ (iv) ರಲ್ಲಿ ನಮೂದಿಸಲಾದ ಶಾಲೆಗಳನ್ನು ಹೊರತುಪಡಿಸಿ, ಇತರ ಯಾವುದೇ ಶಾಲೆಗೆ ವರ್ಗಾವಣೆಯನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(3) ಈ ರೀತಿಯಾಗಿ ಬೇರೊಂದು ಶಾಲೆಯಲ್ಲಿ ಪ್ರವೇಶ ಪಡೆಯಲು, ಆ ಮಗು ಈ ಹಿಂದೆ ಪ್ರವೇಶ ಪಡೆದಿದ್ದ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಮೇಲ್ವಿಚಾರಕರು ತಕ್ಷಣ ವರ್ಗಾವಣೆ ಪತ್ರವನ್ನು ಕೊಡತಕ್ಕದ್ದು.
ವರ್ಗಾವಣೆ ಪತ್ರವನ್ನು ಹಾಜರುಪಡಿಸುವಲ್ಲಿ ವಿಳಂಬವಾದಲ್ಲಿ, ಅದು ಮೇಲೆ ವಿವರಿಸಿದಂತೆ ಬೇರೊಂದು ಶಾಲೆಯಲ್ಲಿ ಪ್ರವೇಶವನ್ನು ವಿಳಂಬಗೊಳಿಸಲು/ನಿರಾಕರಿಸಲು ಕಾರಣವಾಗುವುದಿಲ್ಲ.
ಈ ರೀತಿ ವರ್ಗಾವಣೆ ಪತ್ರವನ್ನು ನೀಡಲು ವಿಳಂಬಿಸುವ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಮೇಲ್ವಿಚಾರಕರು ಅವರಿಗೆ ಅನ್ವಯಿಸಬಲ್ಲಂತಹ ಸೇವಾ ನಿಯಮಗಳ ಅಡಿಯಲ್ಲಿ ಕೈಗೊಳ್ಳಬಹುದಾದ ಶಿಸ್ತುಕ್ರಮಗಳಿಗೆ ಗುರಿಯಾಗುತ್ತಾರೆ.

## ಅಧ್ಯಾಯ – ೩
## ಸಮುಚಿತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಮತ್ತು ಪೋಷಕರ ಕರ್ತವ್ಯಗಳು

**ಕಲಂ – 6 : ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಗಿರುವ, ಶಾಲೆಯನ್ನು ಸ್ಥಾಪಿಸಬೇಕಾದಂತಹ ಕರ್ತವ್ಯ**

ಈ ಕಾಯಿದೆಯಲ್ಲಿ ತಿಳಿಸಲಾಗಿರುವ ಉಪಬಂಧಗಳನ್ನು ಕಾರ್ಯಗತಗೊಳಿಸಲು, ವಿಧಿಸಲಾದಂತಹ ಪ್ರದೇಶ ಹಾಗೂ ಆಸುಪಾಸಿನ ವ್ಯಾಪ್ತಿಯೊಳಗೆ ಶಾಲೆಯನ್ನು ಸ್ಥಾಪಿಸದೇ ಇದ್ದಂತಹ ಸಂದರ್ಭದಲ್ಲಿ, ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರವು ಈ ಕಾಯಿದೆ ಜಾರಿಯಾದಂದಿನಿಂದ ಮೂರು ವರ್ಷಗಳ ಅವಧಿಯೊಳಗೆ ಶಾಲೆಯನ್ನು ಸ್ಥಾಪಿಸತಕ್ಕದ್ದು.

**ಕಲಂ – 7 : ಆರ್ಥಿಕ ಹಾಗೂ ಇನ್ನಿತರ ಹೊಣೆಗಾರಿಕೆಗಳ ಹಂಚಿಕೆ**

(1) ಈ ಕಾಯಿದೆಯಲ್ಲಿ ತಿಳಿಸಲಾದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಧನಸಹಾಯವನ್ನು ಒದಗಿಸುವ ಸಮಾನ ಜವಾಬ್ದಾರಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗಿರುತ್ತದೆ.

(2) ಈ ಕಾಯಿದೆಯ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಬಂಡವಾಳ ಧನ ಮತ್ತು ಆವರ್ತಕ[3] ಖರ್ಚುವೆಚ್ಚಗಳ ಪ್ರಮಾಣವನ್ನು ಕೇಂದ್ರ ಸರ್ಕಾರವು ಅಂದಾಜುಮಾಡತಕ್ಕದ್ದು.

(3) ಉಪ ಕಲಂ 2 ರಲ್ಲಿ ಸೂಚಿಸಿರುವಂತಹ ಖರ್ಚುವೆಚ್ಚಗಳನ್ನು ನಿರ್ವಹಿಸಲು ಬೇಕಾದ ಹಣದ ಪ್ರಮಾಣವನ್ನು ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳೊಡನೆ ಸಮಾಲೋಚಿಸಿ, ಕಾಲ ಕಾಲಕ್ಕೆ ಸರಿಯಾಗಿ ನಿರ್ಧರಿಸುತ್ತದೆ ಹಾಗೂ ರಾಜ್ಯ ಸರ್ಕಾರಗಳಿಗೆ ರಾಜ್ಯಾದಾಯದೊಡನೆ ಸಹಾಯಧನದ ರೂಪದಲ್ಲಿ ನೀಡುತ್ತದೆ.

(4) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಅಗತ್ಯವಾದ ತನ್ನ ಪಾಲಿನ ದೇಣಿಗೆಯನ್ನು ನೀಡಲು ಯಾವುದಾದರೂ ರಾಜ್ಯಸರ್ಕಾರಕ್ಕೆ ಅವಶ್ಯವಾದ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸುವ ಅಗತ್ಯತೆಯನ್ನು

---

[3] ನಿಯತಕಾಲಗಳಲ್ಲಿ ತಲೆದೋರುವ ಎಂದರ್ಥ. ಅರ್ಥ ವಿವರಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ 1999 ರಲ್ಲಿ ಪ್ರಕಟಿಸಿದ ಇಂಗ್ಲೀಷ್–ಕನ್ನಡ ನಿಘಂಟಿನ ಪು.ಸಂ. 775 ರಿಂದ ತೆಗೆದುಕೊಳ್ಳಲಾಗಿದೆ.

ಪರಿಶೀಲಿಸಲು , ಸಂವಿಧಾನದ ಅನುಚ್ಛೇದ 280 ರ ಖಂಡ 3 ರ ಉಪಖಂಡ (d) ಯ ಅಡಿಯಲ್ಲಿ ಹಣಕಾಸು ಆಯೋಗಕ್ಕೆ ಸೂಚಿಸಲು ರಾಷ್ಟ್ರಪತಿಗಳಿಗೆ ಕೇಂದ್ರ ಸರ್ಕಾರವು ಮನವಿಯನ್ನು ಸಲ್ಲಿಸಬಹುದು.

(5) ಉಪಕಲಂ (4) ಅದೇನನ್ನೇ ಒಳಗೊಂಡಿದ್ದರೂ, ರಾಜ್ಯಸರ್ಕಾರವು ಉಪಕಲಂ (3) ರಲ್ಲಿ ಸೂಚಿಸಿದಂತೆ, ಕೇಂದ್ರಸರ್ಕಾರವು ನೀಡುವ ನೆರವಿನ ಮೊತ್ತ (ದೇಣಿಗೆ) ಹಾಗೂ ತನ್ನ ಇತರೆ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು, ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಅಗತ್ಯವಾದ ದೇಣಿಗೆಯನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

(6) ಕೇಂದ್ರ ಸರ್ಕಾರವು –

(a) ಕಲಂ 29 ರಲ್ಲಿ ನಿರ್ದಿಷ್ಟವಾಗಿ ಸೂಚಿಸಿರುವ ಶಿಕ್ಷಣ ಪ್ರಾಧಿಕಾರದ ಸಹಾಯದೊಂದಿಗೆ (ಸಹಯೋಗದೊಂದಿಗೆ) ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಸಿದ್ಧಪಡಿಸಬೇಕು.

(b) ಶಿಕ್ಷಕರ ತರಬೇತಿಗಾಗಿ ಬೇಕಾದಂತಹ ನಿರ್ದಿಷ್ಟ ಮಾನದಂಡಗಳನ್ನು ಅಭಿವೃದ್ಧಿಪಡಿಸಿ, ಜಾರಿಗೆ ತರಬೇಕು.

(c) ನವೀನತೆ, ಸಂಶೋಧನೆ, ಯೋಜನೆ ಮತ್ತು ಸಾಮರ್ಥ್ಯ ನಿರ್ಮಾಣವನ್ನು ಉತ್ತೇಜಿಸಲು ರಾಜ್ಯಸರ್ಕಾರಕ್ಕೆ ಅಗತ್ಯವಾದಂತಹ ತಾಂತ್ರಿಕ ನೆರವು ಮತ್ತು ಸಂಪನ್ಮೂಲಗಳನ್ನು ಒದಗಿಸಬೇಕು.

**ಕಲಂ - 8 : ಸಮುಚಿತ ಸರ್ಕಾರದ ಕರ್ತವ್ಯಗಳು**

ಸಮುಚಿತ ಸರ್ಕಾರವು –

(a) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;
ಆದರೆ, ಮಗುವೊಂದನ್ನು ಅವನ/ಅವಳ ಪೋಷಕರು ಅಥವಾ ಪಾಲಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟ, ಅವುಗಳ ಸ್ವಾಮ್ಯತ್ವಕ್ಕೊಳಪಟ್ಟ, ಅಥವಾ ಅವುಗಳಿಂದ ನಿಯಂತ್ರಿಸಲ್ಪಡುವ ಅಥವಾ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಗಣನೀಯ ಪ್ರಮಾಣದ ಆರ್ಥಿಕ ನೆರವನ್ನು ಪಡೆದಿರುವ ಶಾಲೆಗಳಲ್ಲದೆ, ಇತರೆ ಶಾಲೆಗೆ ಸೇರಿಸಿದ್ದಲ್ಲಿ, ಅಂತಹ ಮಗು ಅಥವಾ ಅವನ/ಳ ಪೋಷಕರು ಅಥವಾ ಪಾಲಕರು, ತಮ್ಮ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ಖರ್ಚುವೆಚ್ಚಗಳನ್ನು ತುಂಬಿಕೊಡುವಂತೆ ವಾದಿಸಲು ಅರ್ಹರಾಗಿರುವುದಿಲ್ಲ.

ವಿವರಣೆ : "ಕಡ್ಡಾಯ ಶಿಕ್ಷಣ" ಎಂದರೆ, ಸಮುಚಿತ ಸರ್ಕಾರದ –

(i) ಆರರಿಂದ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಪ್ರತಿಯೊಂದು ಮಗುವಿಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ; ಮತ್ತು

(ii) ಆರರಿಂದ ಹದಿನಾಲ್ಕು ವರ್ಷಗಳೊಳಗಿನ ಪ್ರತಿಯೊಂದು ಮಗುವೂ ಶಾಲೆಗೆ ಕಡ್ಡಾಯವಾಗಿ ಪ್ರವೇಶ ಪಡೆಯುವಂತೆ, ಹಾಜರಿ ಹೊಂದಿರುವಂತೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವಂತೆ ಖಾತರಿಪಡಿಸುವ

– ಅವಶ್ಯ ಕರ್ತವ್ಯ;

(b) ಕಲಂ 6 ರಲ್ಲಿ ನಿರ್ದಿಷ್ಟಪಡಿಸಿದಂತೆ ಆಸುಪಾಸಿನ ಶಾಲೆಗಳ ಸೌಲಭ್ಯ ದೊರಕುವುದನ್ನು ಖಾತರಿಪಡಿಸತಕ್ಕದ್ದು;

(c) ದುರ್ಬಲ ವರ್ಗ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಗಳಿಂದಾಗಿ ತಾರತಮ್ಯಗಳಿಗೆ ಒಳಗಾಗದಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದರಿಂದ ಅಥವಾ ಪೂರ್ತಿಗೊಳಿಸುವುದರಿಂದ ವಂಚಿತರಾಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು;

(d) ಶಾಲಾ ಕಟ್ಟಡ, ಶಿಕ್ಷಕ ವೃಂದ, ಹಾಗೂ ಕಲಿಕಾ ಸಾಮಾಗ್ರಿ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು;

(e) ಕಲಂ 4 ರಲ್ಲಿ ಸ್ಪಷ್ಟಪಡಿಸಿದಂತಹ ವಿಶೇಷ ತರಬೇತಿಯ ಸೌಲಭ್ಯವನ್ನು ಒದಗಿಸತಕ್ಕದ್ದು;

(f) ಪ್ರತಿ ಮಗುವೂ ಶಾಲೆಗೆ ದಾಖಲಾಗುವಂತೆ, ಹಾಜರಿ ಹೊಂದಿರುವಂತೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳತಕ್ಕದ್ದು ಹಾಗೂ ಖಾತರಿಪಡಿಸಿಕೊಳ್ಳತಕ್ಕದ್ದು;

(g) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮಾನಕಗಳು ಹಾಗೂ ಗುಣಮಟ್ಟಗಳಿಗೆ ಸರಿಹೊಂದುವಂತಹ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರಕುವಂತೆ ನೋಡಿಕೊಳ್ಳತಕ್ಕದ್ದು;

(h) ಸಕಾಲಕ್ಕೆ ಪಠ್ಯವಿಷಯಗಳನ್ನು ಮತ್ತು ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮವನ್ನು ಸೂಚಿಸುವಿಕೆಯನ್ನು ಖಾತರಿಪಡಿಸಿಕೊಳ್ಳತಕ್ಕದ್ದು; ಮತ್ತು

(i) ಶಿಕ್ಷಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸತಕ್ಕದ್ದು.

**ಕಲಂ – 9 : ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು**

ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ –

(a) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;
ಆದರೆ, ಮಗುವೊಂದನ್ನು ಅವನ/ಅವಳ ಪೋಷಕರು ಅಥವಾ ಪಾಲಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟ, ಅವುಗಳ ಸ್ವಾಮ್ಯತ್ವಕ್ಕೊಳಪಟ್ಟ, ಅಥವಾ ಅವುಗಳಿಂದ ನಿಯಂತ್ರಿಸಲ್ಪಡುವ ಅಥವಾ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಗಣನೀಯ ಪ್ರಮಾಣದ ಆರ್ಥಿಕ ನೆರವನ್ನು ಪಡೆದಿರುವ ಶಾಲೆಗಳಲ್ಲದೆ, ಇತರೆ ಶಾಲೆಗೆ ಸೇರಿಸಿದ್ದಲ್ಲಿ, ಅಂತಹ ಮಗು ಅಥವಾ ಅವನ/ಳ ಪೋಷಕರು ಅಥವಾ ಪಾಲಕರು, ತಮ್ಮ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ಖರ್ಚುವೆಚ್ಚಗಳನ್ನು ತುಂಬಿಕೊಡುವಂತೆ ವಾದಿಸಲು ಅರ್ಹರಾಗಿರುವುದಿಲ್ಲ;

(b) ಕಲಂ 6 ರಲ್ಲಿ ನಿರ್ದಿಷ್ಟಪಡಿಸಿದಂತೆ ಆಸುಪಾಸಿನ ಶಾಲೆಗಳ ಸೌಲಭ್ಯ ದೊರಕುವುದನ್ನು ಖಾತರಿಪಡಿಸತಕ್ಕದ್ದು;

(c) ದುರ್ಬಲ ವರ್ಗ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಗಳಿಂದಾಗಿ ತಾರತಮ್ಯಗಳಿಗೆ ಒಳಗಾಗದಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದರಿಂದ ಅಥವಾ ಪೂರ್ತಿಗೊಳಿಸುವುದರಿಂದ ವಂಚಿತರಾಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು;

(d) ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದ ರೀತಿಯಲ್ಲಿ, ತಮ್ಮ ಅಧಿಕಾರವ್ಯಾಪ್ತಿಯೊಳಗೆ ವಾಸಿಸುತ್ತಿರುವಂತಹ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಮಕ್ಕಳ ದಾಖಲೆಗಳನ್ನು ಸಂರಕ್ಷಿಸಿಡಬೇಕು;

(e) ತನ್ನ ಅಧಿಕಾರವ್ಯಾಪ್ತಿಯೊಳಗೆ ವಾಸಿಸುತ್ತಿರುವಂತಹ ಪ್ರತಿಯೊಂದು ಮಗುವೂ ಶಾಲೆಗೆ ದಾಖಲಾಗುವಂತೆ, ಹಾಜರಿ ಹೊಂದಿರುವಂತೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವಂತೆ ನೋಡಿಕೊಳ್ಳಬೇಕು ಮತ್ತು ಖಾತರಿಪಡಿಸಿಕೊಳ್ಳಬೇಕು;

(f) ಶಾಲಾ ಕಟ್ಟಡ, ಶಿಕ್ಷಕ ವೃಂದ, ಹಾಗೂ ಕಲಿಕಾ ಸಾಮಾಗ್ರಿ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು;

(g) ಕಲಂ 4 ರಲ್ಲಿ ಸ್ಪಷ್ಟಪಡಿಸಿದಂತಹ ವಿಶೇಷ ತರಬೇತಿಯ ಸೌಲಭ್ಯವನ್ನು ಒದಗಿಸತಕ್ಕದ್ದು;

(h) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮಾನಕಗಳು ಹಾಗೂ ಗುಣಮಟ್ಟಗಳಿಗೆ ಸರಿಹೊಂದುವಂತಹ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರಕುವಂತೆ ನೋಡಿಕೊಳ್ಳತಕ್ಕದ್ದು;

(i) ಸಕಾಲಕ್ಕೆ ಪಠ್ಯವಿಷಯಗಳನ್ನು ಮತ್ತು ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮವನ್ನು ಸೂಚಿಸುವಿಕೆಯನ್ನು ಖಾತರಿಪಡಿಸಿಕೊಳ್ಳತಕ್ಕದ್ದು;

(j) ಶಿಕ್ಷಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(k) ವಲಸಿಗ ಕುಟುಂಬಗಳ ಮಕ್ಕಳು ಶಾಲೆಗೆ ದಾಖಲಾಗುವಂತೆ ನೋಡಿಕೊಳ್ಳಬೇಕು;

(l) ತನ್ನ ಅಧಿಕಾರವ್ಯಾಪ್ತಿಯೊಳಗೆ, ಶಾಲೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು; ಮತ್ತು

(m) ಶೈಕ್ಷಣಿಕ ಪಂಚಾಂಗವನ್ನು ನಿರ್ಧರಿಸಬೇಕು.

**ಕಲಂ – 10 : ಪೋಷಕರ ಮತ್ತು ಪಾಲಕರ ಕರ್ತವ್ಯ**

ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂರಕ್ಷಣೆಯಲ್ಲಿರುವ ಪ್ರತಿಯೊಂದು ಮಗುವನ್ನೂ ಪ್ರಾಥಮಿಕ ಶಿಕ್ಷಣಕ್ಕಾಗಿ ಆಸುಪಾಸಿನ ಶಾಲೆಗೆ ಸೇರಿಸುವುದು ಅಥವಾ ಸೇರಿಸುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಪೋಷಕ ಅಥವಾ ಪಾಲಕರ ಆದ್ಯ ಕರ್ತವ್ಯವಾಗಿದೆ.

**ಕಲಂ – 11: ಸಮುಚಿತ ಸರ್ಕಾರ – ಶಾಲಾ–ಪೂರ್ವ ಶಿಕ್ಷಣ ಒದಗಿಸುವಿಕೆ**

ಮೂರು ವರ್ಷವನ್ನು ದಾಟಿದ ಎಲ್ಲ ಮಕ್ಕಳನ್ನು ಮುಂದೆ ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಲು ಅಣಿಗೊಳಿಸುವ ಹಾಗೂ ಮಕ್ಕಳಿಗೆ ಆರಂಭಿಕ ಬಾಲ್ಯ ಪೋಷಣೆಯನ್ನು ಮತ್ತು ಆರು ವರ್ಷ ಪೂರ್ತಿಯಾಗುವವರೆಗೆ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಸಮುಚಿತ ಸರ್ಕಾರವು ಉಚಿತವಾಗಿ ಶಾಲಾ–ಪೂರ್ವ ಶಿಕ್ಷಣವನ್ನು ಒದಗಿಸುವ ಸೌಲಭ್ಯವನ್ನು ಮಾಡಿಕೊಡಬಹುದು.

## ಅಧ್ಯಾಯ – ೪
## ಶಾಲೆಗಳ ಮತ್ತು ಶಿಕ್ಷಕರ ಜವಾಬ್ದಾರಿಗಳು

**ಕಲಂ – 12 : ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವಲ್ಲಿ ಶಾಲೆಗಳ ಜವಾಬ್ದಾರಿಯ ವ್ಯಾಪ್ತಿ**

(1) ಈ ಕಾಯಿದೆಯ ಉದ್ದೇಶಕ್ಕಾಗಿ,

(a) ಕಲಂ 2, ಖಂಡ (n) ರ ಉಪಖಂಡ (i) ರಲ್ಲಿ ನಿರ್ದಿಷ್ಟವಾಗಿ ನಮೂದಿಸಲ್ಪಟ್ಟಂತಹ ಶಾಲೆಗಳು, ತಮ್ಮಲ್ಲಿ ಪ್ರವೇಶ ಪಡೆದಿರುವ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;

(b) ಕಲಂ 2, ಖಂಡ (n) ರ ಉಪಖಂಡ (ii) ರಲ್ಲಿ ನಿರ್ದಿಷ್ಟವಾಗಿ ನಮೂದಿಸಲ್ಪಟ್ಟಂತಹ ಶಾಲೆಗಳು, ತಮ್ಮ ವಾರ್ಷಿಕ ಆವರ್ತಕ ಖರ್ಚುವೆಚ್ಚಗಳಿಗೆ ಅನ್ವಯವಾಗುವಂತೆ ತಾವು ಪಡೆದುಕೊಳ್ಳುವ ವಾರ್ಷಿಕ ಆವರ್ತಕ ಸಹಾಯಧನದ ಪ್ರಮಾಣಕ್ಕನುಗುಣವಾಗಿ, ತಮ್ಮಲ್ಲಿ ಪ್ರವೇಶ ಪಡೆಯುವ ಮಕ್ಕಳಿಗೆ, ಒಟ್ಟು ಮಕ್ಕಳಲ್ಲಿ ಶೇ. 25ಕ್ಕೆ ಕಡಿಮೆಯಿಲ್ಲದಂತೆ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡತಕ್ಕದ್ದು;

(c) ಕಲಂ 2, ಖಂಡ (n) ರ ಉಪಖಂಡ (iii) ಮತ್ತು (iv) ರಲ್ಲಿ ನಿರ್ದಿಷ್ಟಪಡಿಸಿದಂತಹ ಶಾಲೆಗಳು ಒಂದನೇ ತರಗತಿಗೆ, ಕೊನೇ ಪಕ್ಷ ಆ ತರಗತಿಯ ಒಟ್ಟು ಮಕ್ಕಳ ಸಂಖ್ಯೆಯ ಶೇಕಡಾ 25 ರಷ್ಟು ಮಕ್ಕಳನ್ನು, ಆಸುಪಾಸಿನಲ್ಲಿರುವ ದುರ್ಬಲ ಮತ್ತು ಪ್ರತಿಕೂಲ ಸ್ಥಿತಿಯ ಗುಂಪಿನಿಂದ ಸೇರಿಸಿಕೊಳ್ಳತಕ್ಕದ್ದು ಹಾಗೂ ಅವರು ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವತನಕ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು.

ಆದರೆ, ಕಲಂ 2, ಖಂಡ (n) ನಲ್ಲಿ ನಮೂದಿಸಿರುವಂತಹ ಶಾಲೆಗಳು ಪೂರ್ವ ಶಿಕ್ಷಣ ಸೌಲಭ್ಯವನ್ನು ನೀಡುತ್ತಿದ್ದಲ್ಲಿ, ಈ ಕಲಂನ ಖಂಡ (a) ಯಿಂದ (c) ಯವರೆಗಿನ ಉಪಬಂಧಗಳು ಅಂತಹ ಪೂರ್ವ–ಶಾಲಾ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಸಂದರ್ಭಕ್ಕೆ ಅನ್ವಯಿಸುತ್ತವೆ.

(2) ಕಲಂ 2, ಖಂಡ (n) ರ ಉಪಖಂಡ (iv) ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಯಾವುದಾದರೂ ಶಾಲೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುತ್ತಿದ್ದಲ್ಲಿ, ಉಪಕಲಂ (1) ರ ಖಂಡ (c) ಯಂತೆ ಪ್ರತಿ ಮಗುವಿಗೆ ರಾಜ್ಯ ಸರ್ಕಾರವು ಶಿಕ್ಷಣ ಒದಗಿಸಲು ಎಷ್ಟು ಖರ್ಚು ಮಾಡುತ್ತದೋ ಅಥವಾ ಮಗುವಿಗೆ ಆ ಶಾಲೆ ಎಷ್ಟು ಶುಲ್ಕವನ್ನು ವಿಧಿಸುವುದೋ ಅವುಗಳಲ್ಲಿ ಯಾವುದು ಕಡಿಮೆ ಇರುವುದೋ ಅಷ್ಟು ಮೊತ್ತವನ್ನು ಆಯಾ ಶಾಲೆಗೆ ನಿರ್ದಿಷ್ಟಪಡಿಸಿದ ವಿಧಿವಿಧಾನದಂತೆ ಮರುಪಾವತಿ ಮಾಡಲಾಗುವುದು.

ಆದರೆ, ಈ ರೀತಿ ಮರುಪಾವತಿ ಮಾಡುವ ಹಣ ಕಲಂ 2, ಖಂಡ (n) ರ ಉಪಖಂಡ (i) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತಿ ಮಗುವಿಗೆ ಆಗುವ ಖರ್ಚನ್ನು ಮೀರಬಾರದು.

ಆದರೆ, ಯಾವುದಾದರೂ ಶಾಲೆಯು ಉಚಿತ ಶಿಕ್ಷಣವನ್ನು ನಿರ್ದಿಷ್ಟ ಸಂಖ್ಯೆಯ ಮಕ್ಕಳಿಗೆ ಕೊಡಲು ಈಗಾಗಲೇ ಬದ್ಧವಾಗಿದ್ದಲ್ಲಿ ಅಂದರೆ, ಸರ್ಕಾರದಿಂದ ಭೂಮಿ, ಕಟ್ಟಡ, ಸಲಕರಣೆಗಳು ಅಥವಾ ಇನ್ನಿತರ ಸೌಕರ್ಯಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಪಡೆದಿದ್ದಲ್ಲಿ ಅಂತಹ ಶಾಲೆಗಳಿಗೆ ಮಕ್ಕಳ ಶಿಕ್ಷಣದ ಶುಲ್ಕವನ್ನು ಮರುಪಾವತಿ ಮಾಡಲು ಸರ್ಕಾರಕ್ಕೆ ಬಾಧ್ಯತೆ ಇರುವುದಿಲ್ಲ.

(3) ಪ್ರತಿಯೊಂದು ಶಾಲೆಯೂ ಸಂದರ್ಭಕ್ಕನುಸಾರವಾಗಿ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಅಪೇಕ್ಷಿಸುವ ಮಾಹಿತಿಯನ್ನು ಒದಗಿಸತಕ್ಕದ್ದು.

**ಕಲಂ – 13 : ದಾಖಲಾತಿ ಸಂದರ್ಭದಲ್ಲಿ, ತಲಾಶುಲ್ಕ ಪಡೆಯದಿರುವುದು ಹಾಗೂ ಪರಿಶೋಧನಾ ಪ್ರಕ್ರಿಯೆಗಳನ್ನು ಅನುಸರಿಸದಿರುವುದು**

(1) ಯಾವುದೇ ಶಾಲೆ ಯಾ ವ್ಯಕ್ತಿ, ಮಕ್ಕಳ ದಾಖಲಾತಿ ಸಂದರ್ಭದಲ್ಲಿ ಯಾವುದೇ ರೀತಿಯ ತಲಾಶುಲ್ಕವನ್ನು ಸಂಗ್ರಹಿಸಬಾರದು ಮತ್ತು ಮಗುವನ್ನು ಅಥವಾ ಅವನ/ಳ ಪಾಲಕರು ಯಾ ಪೋಷಕರನ್ನು ಯಾವುದೇ ರೀತಿಯ ಪರಿಶೋಧನಾ ಪ್ರಕ್ರಿಯೆಗಳಿಗೆ ಒಳಪಡಿಸಬಾರದು.

(2) ಯಾವುದಾದರೂ ಶಾಲೆ ಅಥವಾ ವ್ಯಕ್ತಿ ಈ ಮೇಲೆ ತಿಳಿಸಲಾದ ಉಪಕಲಂ (1) ರ ಉಪಬಂಧವನ್ನು ಉಲ್ಲಂಘಿಸಿ –

(a) ತಲಾಶುಲ್ಕವನ್ನು ಪಡೆದಿದ್ದೇ ಆದಲ್ಲಿ, ತೆಗೆದುಕೊಂಡ ಶುಲ್ಕದ ಸುಮಾರು ಹತ್ತು ಪಟ್ಟು ಮೊತ್ತದ ಹಣವನ್ನು ದಂಡವಾಗಿ ತೆರಬೇಕಾದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

(b) ಮಕ್ಕಳನ್ನು ಪರಿಶೋಧನಾ ಪ್ರಕ್ರಿಯೆಗಳಿಗೆ ಒಳಪಡಿಸಿದ್ದೇ ಆದಲ್ಲಿ, ಮೊದಲ ಬಾರಿಯ ಉಲ್ಲಂಘನೆಗೆ ರೂಪಾಯಿ 25000 ದಷ್ಟು ಹಾಗೂ ಉಲ್ಲಂಘನೆಯನ್ನು ಪುನರಾವರ್ತಿಸಿದಲ್ಲಿ, ಪ್ರತೀ ಬಾರಿಯ ಪುನರಾವರ್ತನೆಗೆ ರೂಪಾಯಿ 50000 ದಷ್ಟು ಹಣವನ್ನು ದಂಡವಾಗಿ ತೆರಬೇಕಾದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

**ಕಲಂ – 14 : ದಾಖಲಾತಿಗಾಗಿ ವಯಸ್ಸಿನ ರುಜುವಾತು**

(1) ಮಗುವನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ಶಾಲೆಗೆ ದಾಖಲಿಸುವ ಸಂದರ್ಭದಲ್ಲಿ ಮಗುವಿನ ವಯಸ್ಸನ್ನು, ಜನನ, ಮರಣ ಮತ್ತು ವಿವಾಹ ನೋಂದಾವಣಾ ಕಾಯಿದೆ 1886 ರ ಉಪಬಂಧಗಳಿಗನುಗುಣವಾಗಿ ಅಥವಾ ಕಾನೂನಿನಲ್ಲಿ ವಿಧಿಸಲಾಗಿರುವ ಇನ್ನಿತರೆ ದಾಖಲೆಗಳ ಆಧಾರದ ಮೇಲೆ ನೀಡಲಾದ ಜನನ ಪ್ರಮಾಣ ಪತ್ರದ ಆಧಾರದ ಮೇಲೆ ನಿರ್ಧರಿಸತಕ್ಕದ್ದು.

(2) ವಯಸ್ಸಿನ ಪ್ರಮಾಣ ಪತ್ರ ಇಲ್ಲವೆಂಬ ಕಾರಣಕ್ಕಾಗಿ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸುವಂತಿಲ್ಲ.

**ಕಲಂ – 15 : ದಾಖಲಾತಿ ನಿರಾಕರಿಸದಿರುವುದು**

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ವಿಧಿಸಬಹುದಾದ ಮುಂದುವರೆಸಿದ ಸಮಾಯಾವಧಿಯೊಳಗೆ ಮಗುವನ್ನು ಶಾಲೆಗೆ ಸೇರಿಸತಕ್ಕದ್ದು.

ಆದರೆ, ಈ ರೀತಿ ಮುಂದುವರೆಸಿದ ಸಮಯಾವಧಿಯ ಬಳಿಕವೂ ಮಕ್ಕಳು ಪ್ರವೇಶವನ್ನು ಅಪೇಕ್ಷಿಸಿದಲ್ಲಿ ಅವರ ಪ್ರವೇಶವನ್ನು ನಿರಾಕರಿಸುವಂತಿಲ್ಲ.

ಆದರೆ, ಈ ರೀತಿ ಮುಂದುವರೆಸಿದ ಸಮಯ ಕೊನೆಗೊಂಡ ಬಳಿಕ ಶಾಲೆಯನ್ನು ಸೇರುವ ಮಕ್ಕಳು, ಸಮುಚಿತ ಸರ್ಕಾರವು ವಿಧಿಸಬಹುದಾದ ರೀತಿಯಲ್ಲಿ ತಮ್ಮ ಅಧ್ಯಯನವನ್ನು ಪೂರೈಸಬೇಕಾಗುತ್ತದೆ.

**ಕಲಂ – 16 : ಅನುತ್ತೀರ್ಣಗೊಳಿಸುವುದರ ಹಾಗೂ ಹೊರಗಟ್ಟುವುದರ ನಿಷೇಧ**

ಶಾಲೆಗೆ ದಾಖಲಾದ ಯಾವುದೇ ಮಗುವನ್ನು ಅವನ/ಳ ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ತರಗತಿಯಲ್ಲಿಯೂ ಅನುತ್ತೀರ್ಣಗೊಳಿಸಿ ಉಳಿಸಿಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

**ಕಲಂ – 17 : ಮಗುವಿಗೆ ಮಾನಸಿಕ ಕಿರುಕುಳ ಮತ್ತು ದೈಹಿಕ ಶಿಕ್ಷೆ ನೀಡುವುದರ ನಿಷೇಧ**

(1) ಯಾವುದೇ ಮಗುವನ್ನು ದೈಹಿಕ ಶಿಕ್ಷೆ ಅಥವಾ ಮಾನಸಿಕ ಕಿರುಕುಳಕ್ಕೆ ಒಳಪಡಿಸತಕ್ಕದ್ದಲ್ಲ.

(2) ಮೇಲ್ಕಂಡ ಉಪಕಲಂ (1) ನ್ನು ಉಲ್ಲಂಘಿಸಿದ ಯಾರೇ ಆಗಲಿ, ಅವರನ್ನು, ಅವರಿಗೆ ಅನ್ವಯವಾಗುವಂತಹ ಸೇವಾ ನಿಯಮಗಳಡಿಯಲ್ಲಿನ ಶಿಸ್ತಿನ ಕ್ರಮಗಳಿಗೊಳಪಡಲು ಬಾಧ್ಯರಾಗಿರುತ್ತಾರೆ.

**ಕಲಂ – 18 : ಮನ್ನಣೆ ಪತ್ರವನ್ನು ಪಡೆಯದೆ ಶಾಲೆಗಳನ್ನು ಸ್ಥಾಪಿಸುವಂತಿಲ್ಲ**

(1) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಸ್ಥಾಪಿಸಲ್ಪಟ್ಟ, ಸ್ವಾಮ್ಯತ್ವಕ್ಕೊಳಪಟ್ಟಿರುವ ಅಥವಾ ನಿಯಂತ್ರಿಸಲ್ಪಡುವ ಶಾಲೆಗಳನ್ನು ಹೊರತುಪಡಿಸಿ, ಇನ್ಯಾವುದೇ ಶಾಲೆಯು, ಈ ಕಾಯಿದೆಯು ಜಾರಿಗೆ ಬಂದ ಬಳಿಕ, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ವಿಧಿಸಲ್ಪಟ್ಟ ರೀತಿಯಲ್ಲಿ ಹಾಗೂ ಮಾದರಿಯಲ್ಲಿ ಅರ್ಜಿ ಸಲ್ಲಿಸಿ ಮನ್ನಣೆ ಪತ್ರವನ್ನು ಪಡೆಯದ ಹೊರತು ಸ್ಥಾಪನೆಯಾಗುವಂತಿಲ್ಲ ಅಥವಾ ಕಾರ್ಯ ನಿರ್ವಹಿಸುವಂತಿಲ್ಲ.

(2) ಉಪ ಕಲಂ (1) ರಲ್ಲಿ ಸೂಚಿಸಿದಂತಹ ನಿಯೋಜಿತ ಪ್ರಾಧಿಕಾರವು ನಿರ್ದಿಷ್ಟ ಸಮಯದೊಳಗೆ, ನಿರ್ದಿಷ್ಟ ಮಾದರಿಯಲ್ಲಿ ಹಾಗೂ ನಿರ್ದಿಷ್ಟ ರೀತಿಯಲ್ಲಿ ವಿಧಿಸಲ್ಪಟ್ಟ ನಿಯಮಗಳಿಗೊಳಪಟ್ಟಂತೆ ಮನ್ನಣೆ ಪತ್ರವನ್ನು ನೀಡತಕ್ಕದ್ದು.

ಆದರೆ, ಕಲಂ 19 ರಲ್ಲಿ ಸ್ಪಷ್ಟಪಡಿಸಿದಂತಹ ಮಾನದಂಡ ಮತ್ತು ಮಾದರಿಗಳನ್ನು ಅನುಸರಿಸದ ಹೊರತು ಯಾವುದೇ ಶಾಲೆಗೆ ಮನ್ನಣೆ ಕೊಡತಕ್ಕದ್ದಲ್ಲ.

(3) ಮನ್ನಣೆ ಪಡೆಯಲು ಸೂಚಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಈ ಕಾಯಿದೆಯಲ್ಲಿ ವಿಧಿಸಲಾದಂತಹ ನಿಯೋಜಿತ ಪ್ರಾಧಿಕಾರವು ಲಿಖಿತ ಆದೇಶವನ್ನು ಹೊರಡಿಸುವ ಮೂಲಕ ಅಂತಹ ಶಾಲೆಗಳಿಗೆ ನೀಡಲಾದ ಮನ್ನಣೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

ಹೀಗಿದ್ದ ಸಂದರ್ಭದಲ್ಲಿ, ಅಂತಹ ಆದೇಶವು, ಮನ್ನಣೆಯನ್ನು ಹಿಂತೆಗೆದುಕೊಂಡಂತಹ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳನ್ನು ಯಾವ ಆಸುಪಾಸಿನ ಶಾಲೆಗಳಿಗೆ ಸೇರಿಸತಕ್ಕದ್ದು ಎಂಬುದರ ಕುರಿತಾಗಿ ಸೂಕ್ತ ನಿರ್ದೇಶನಗಳನ್ನು ಒಳಗೊಂಡಿರಬೇಕು.

ಆದರೆ, ಅಂತಹ ಶಾಲೆಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಈ ಕಾಯಿದೆಯಲ್ಲಿ ವಿಧಿಸಿದ ಪ್ರಕಾರ ಯಥೋಚಿತ ಅವಕಾಶವನ್ನು ನೀಡದ ಹೊರತು ಮನ್ನಣೆಯನ್ನು ಮೇಲೆ ತಿಳಿಸಲಾದಂತೆ ಹಿಂತೆಗೆದುಕೊಳ್ಳುವಂತಿಲ್ಲ.

(4) ಉಪಕಲಂ (3) ರಡಿಯಲ್ಲಿ ತಿಳಿಸಿದಂತೆ, ಶಾಲೆಗೆ ನೀಡಿರುವ ಮನ್ನಣೆಯನ್ನು ಹಿಂತೆಗೆದುಕೊಂಡ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಅಂತಹ ಯಾವುದೇ ಶಾಲೆಯೂ ಕಾರ್ಯ ನಿರ್ವಹಿಸುವಂತಿಲ್ಲ.

(5) ಯಾವುದೇ ವ್ಯಕ್ತಿ ಮೇಲೆ ತಿಳಿಸಿದಂತೆ ಮನ್ನಣೆ ಪತ್ರವನ್ನು ಪಡೆಯದೇ ಯಾವುದಾದರೂ ಶಾಲೆಯನ್ನು ಸ್ಥಾಪಿಸಿದಲ್ಲಿ ಅಥವಾ ನಡೆಸಿದಲ್ಲಿ ಅಥವಾ ಶಾಲೆಗೆ ನೀಡಲಾದ ಮನ್ನಣೆಯನ್ನು ಹಿಂತೆಗೆದುಕೊಂಡ ಬಳಿಕವೂ ಶಾಲೆಯ ಆಡಳಿತವನ್ನು ಮುಂದುವರಿಸಿದಲ್ಲಿ, ಅಂತಹ ವ್ಯಕ್ತಿಯು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ತೆರಬೇಕಾಗುತ್ತದೆ ಮತ್ತು ಮೇಲಿನ ನಿಯಮಗಳ ಉಲ್ಲಂಘನೆಯನ್ನು ಪುನರಾವರ್ತಿಸಿದಲ್ಲಿ, ಉಲ್ಲಂಘನೆಯನ್ನು ಮುಂದುವರಿಸಲಾದ ಪ್ರತೀ ದಿನವೊಂದಕ್ಕೆ ರೂಪಾಯಿ 10000 ದಂತೆ ದಂಡ ತೆರಬೇಕಾದ ಶಿಕ್ಷೆಗೆ ಗುರಿಯಾಗುತ್ತಾನೆ.

**ಕಲಂ – 19 : ಶಾಲೆಗಳಿಗೆ ಸೂಚಿಸಲಾದ ಗುಣಮಟ್ಟಗಳು ಮತ್ತು ಮಾನದಂಡಗಳು**

(1) ಯಾವುದೇ ಶಾಲೆಯು ಈ ಕಾಯಿದೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಗುಣಮಟ್ಟಗಳು ಮತ್ತು ಮಾನದಂಡಗಳನ್ನು ಪೂರೈಸದ ಹೊರತು ಕಲಂ18 ರ ಅಡಿಯಲ್ಲಿ ಅಂತಹ ಯಾವುದೇ ಶಾಲೆಯನ್ನು ಸ್ಥಾಪಿಸದಿರುವುದು ಅಥವಾ ಮನ್ನಣೆ ನೀಡದಿರತಕ್ಕದ್ದು.

(2) ಈ ಕಾಯಿದೆಯು ಅನುಷ್ಠಾನಕ್ಕೆ ಬರುವ ಮೊದಲೇ ಸ್ಥಾಪಿಸಲ್ಪಟ್ಟ ಶಾಲೆಯು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತಹ ಗುಣಮಟ್ಟಗಳು ಹಾಗೂ ಮಾನಕಗಳನ್ನು ಪೂರೈಸದೇ ಇದ್ದಲ್ಲಿ, ಅಂತಹ ಶಾಲೆಯು ತನ್ನ ಸ್ವಂತ ಖರ್ಚಿನಲ್ಲಿ, ವಿಧಿಸಲಾದಂತಹ ಗುಣಮಟ್ಟ ಮತ್ತು ಮಾನಕಗಳನ್ನು, ಕಾಯಿದೆಯು ಪ್ರಾರಂಭವಾದ ದಿನಾಂಕದಿಂದ 3 ವರ್ಷಗಳೊಳಗಾಗಿ ಪೂರೈಸತಕ್ಕದ್ದು.

(3) ಈ ಮೇಲಿನ ಉಪಕಲಂ 2 ರಲ್ಲಿ ನಿರ್ದಿಷ್ಟಪಡಿಸಲಾದಂತಹ ಕಾಲಾವಧಿಯೊಳಗೆ ಯಾವ ಶಾಲೆಯು ವಿಧಿಸಲಾದ ಗುಣಮಟ್ಟಗಳು ಹಾಗೂ ಮಾನಕಗಳನ್ನು ಪೂರೈಸುವಲ್ಲಿ ವಿಫಲವಾಗುತ್ತದೆಯೋ, ಅಂತಹ ಸಂದರ್ಭದಲ್ಲಿ, ಕಲಂ 18 ರ ಉಪಕಲಂ (1) ರಲ್ಲಿ ನಿಯಮಿಸಲ್ಪಟ್ಟಂತಹ ಪ್ರಾಧಿಕಾರವು ಅದೇ ಕಲಂನ (3) ನೇ ಉಪಕಲಂನ ಅಡಿಯಲ್ಲಿ ನಮೂದಿಸಿದಂತಹ ರೀತಿಯಲ್ಲಿ ಆ ಶಾಲೆಗೆ ನೀಡಲಾದ ಮನ್ನಣೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

(4) ಉಪಕಲಂ (3) ರಲ್ಲಿ ತಿಳಿಸಿದಂತೆ ಮನ್ನಣೆಯನ್ನು ಹಿಂತೆಗೆದುಕೊಳ್ಳಲಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಅಂತಹ ಶಾಲೆಗಳು ಕಾರ್ಯ ನಿರ್ವಹಿಸುವಂತಿಲ್ಲ.

(5) ಮನ್ನಣೆಯನ್ನು ಹಿಂತೆಗೆದುಕೊಂಡ ಬಳಿಕವೂ ಯಾವುದೇ ವ್ಯಕ್ತಿ ಶಾಲೆಯನ್ನು ನಡೆಸಿದಲ್ಲಿ, ಆತ ಒಂದು ಲಕ್ಷ ರೂಪಾಯಿಗಳವರೆಗೂ ವಿಸ್ತರಿಸಬಹುದಾದ ದಂಡ ತೆರುವ ಶಿಕ್ಷೆಗೆ ಗುರಿಯಾಗುತ್ತಾನೆ ಮತ್ತು ಪುನರಾವರ್ತಿತ ಉಲ್ಲಂಘನೆಗೆ, ಉಲ್ಲಂಘನೆಯನ್ನು ಮುಂದುವರೆಸಲಾದ ಪ್ರತೀ ದಿನವೊಂದಕ್ಕೆ ರೂಪಾಯಿ 10000 ದಂತೆ ದಂಡ ತೆರಬೇಕಾಗುತ್ತದೆ.

**ಕಲಂ – 20 : ಅನುಸೂಚಿಯನ್ನು ತಿದ್ದುಪಡಿ ಮಾಡಬಹುದಾದ ಅಧಿಕಾರ**

ಕೇಂದ್ರಸರ್ಕಾರವು ಅಧಿಸೂಚನೆಯ ಮೂಲಕ ಅನುಸೂಚಿಗೆ ಯಾವುದಾದರೂ ಹೊಸ ಗುಣಮಟ್ಟಗಳನ್ನು ಮತ್ತು ಮಾನಕಗಳನ್ನು ಸೇರ್ಪಡೆ ಮಾಡಿ, ಅಥವಾ ಅನುಸೂಚಿಯಲ್ಲಿ ಮೊದಲೇ ಇದ್ದಂತಹ ಗುಣಮಟ್ಟಗಳು ಯಾ ಮಾನಕಗಳನ್ನು ತೆಗೆದುಹಾಕಿ ತಿದ್ದುಪಡಿ ಮಾಡಬಹುದು.

**ಕಲಂ – 21 : ಶಾಲಾ ನಿರ್ವಹಣಾ ಸಮಿತಿ**

(1) ಕಲಂ 2, ಖಂಡ (n) ರ ಉಪಖಂಡ (iv) ರಲ್ಲಿ ನಿರ್ದಿಷ್ಟಪಡಿಸಿರುವಂತಹ ಶಾಲೆಗಳನ್ನು ಹೊರತುಪಡಿಸಿ, ಇತರೆ ಶಾಲೆ ಒಂದು ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸತಕ್ಕದ್ದು ಹಾಗೂ ಈ ಸಮಿತಿ, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಆ ಶಾಲೆಗೆ ದಾಖಲಾಗಿರುವ ಮಕ್ಕಳ ಪಾಲಕರ ಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರತಕ್ಕದ್ದು:

ಅಂತಹ ಸಮಿತಿಯ ಒಟ್ಟು ಸದಸ್ಯರಲ್ಲಿ ಕನಿಷ್ಠ ನಾಲ್ಕನೇ ಮೂರು ಭಾಗದಷ್ಟು ಪಾಲಕರು ಯಾ ಪೋಷಕರನ್ನು ಸದಸ್ಯರನ್ನಾಗಿ ಒಳಗೊಂಡಿರತಕ್ಕದ್ದು:

ಮತ್ತು, ಪ್ರತಿಕೂಲ ಗುಂಪು ಹಾಗೂ ದುರ್ಬಲ ವರ್ಗಕ್ಕೆ ಸೇರಿದಂತಹ ಮಕ್ಕಳ ಪಾಲಕರು ಅಥವಾ ಪೋಷಕರಿಗೆ ಪ್ರಮಾಣಾನುಸಾರವಾದ ಪ್ರಾತಿನಿಧ್ಯವನ್ನು ನೀಡತಕ್ಕದ್ದು:

ಹಾಗೆಯೇ, ಅಂತಹ ಸಮಿತಿಯ ಒಟ್ಟು ಸದಸ್ಯರ ಶೇಕಡಾ 50 ರಷ್ಟು ಮಹಿಳಾ ಸದಸ್ಯರಿರಬೇಕು.

(2) ಶಾಲಾ ನಿರ್ವಹಣಾ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಅವುಗಳೆಂದರೆ –

(a) ಶಾಲೆಯ ಕೆಲಸಕಾರ್ಯಗಳ ಮೇಲುಸ್ತುವಾರಿಕೆ;

(b) ಶಾಲಾಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಮತ್ತು ಶಿಫಾರಸು ಮಾಡುವುದು;

(c) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಇತರ ಯಾವುದೇ ಮೂಲದಿಂದ ಪಡೆದಂತಹ ದೇಣಿಗೆಯ ಸದ್ವಿನಿಯೋಗದ ಮೇಲ್ವಿಚಾರಣೆ ನೋಡಿಕೊಳ್ಳುವುದು; ಮತ್ತು

(d) ಈ ಕಾಯಿದೆಯಡಿ ವಿಧಿಸಬಹುದಾದ ಇನ್ನಿತರೆ ಕೆಲಸಗಳ ನಿರ್ವಹಣೆ.

**ಕಲಂ – 22 : ಶಾಲಾಭಿವೃದ್ಧಿ ಯೋಜನೆ**

(1) ಕಲಂ 21 ರ ಉಪಕಲಂ (1) ರಡಿಯಲ್ಲಿ ರಚಿತವಾದ ಪ್ರತಿಯೊಂದು ಶಾಲಾ ನಿರ್ವಹಣಾ ಸಮಿತಿಯೂ ವಿಧಿಸಬಹುದಾದ ರೀತಿಯಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸತಕ್ಕದ್ದು.

(2) ಉಪಕಲಂ (1) ರಲ್ಲಿ ಸೂಚಿಸಿದಂತೆ ತಯಾರಿಸಲಾದ ಶಾಲಾಭಿವೃದ್ಧಿ ಯೋಜನೆಯು ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳು ಸಂದರ್ಭಾನುಸಾರವಾಗಿ ಕೊಡತಕ್ಕಂತಹ ದೇಣಿಗೆ ಹಾಗೂ ಯೋಜನೆಗಳಿಗೆ ಆಧಾರವಾಗಿರುತ್ತದೆ.

**ಕಲಂ – 23 : ಶಿಕ್ಷಕರ ನೇಮಕಾತಿಗೆ ಇರಬೇಕಾದ ಅರ್ಹತೆ ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು**

(1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕಾರ ನೀಡಿದಂತಹ ಶಿಕ್ಷಣ ಪ್ರಾಧಿಕಾರವು ನಿರ್ಣಯಿಸಿದ, ಕನಿಷ್ಠ ಅರ್ಹತೆಯನ್ನು ಹೊಂದಿರುವ ಯಾವುದೇ ವ್ಯಕ್ತಿಯು ಶಿಕ್ಷಕನಾಗಿ/ಳಾಗಿ ನೇಮಕಾತಿ ಹೊಂದಲು ಅರ್ಹನಾಗಿರುತ್ತಾನೆ/ಳೆ.

(2) ಯಾವುದಾದರೂ ರಾಜ್ಯದಲ್ಲಿ, ಶಿಕ್ಷಕರಿಗೆ ಶಿಕ್ಷಣ ನೀಡಲು ಯಾವುದೇ ರೀತಿಯ ಪಠ್ಯಕ್ರಮ ಅಥವಾ ತರಬೇತಿ ನೀಡುವ ಸಂಸ್ಥೆಗಳು ಬೇಕಾದಷ್ಟು ಸಂಖ್ಯೆಯಲ್ಲಿ ಇರದಿದ್ದ ಪಕ್ಷದಲ್ಲಿ ಅಥವಾ ಉಪಕಲಂ (1) ರಲ್ಲಿ ಸೂಚಿಸಿರುವಂತೆ ಕನಿಷ್ಠ ಅರ್ಹತೆಯನ್ನು ಹೊಂದಿರುವ ಶಿಕ್ಷಕರು ಬೇಕಾದಷ್ಟು ಸಂಖ್ಯೆಯಲ್ಲಿ ಇರದಿದ್ದ ಪಕ್ಷದಲ್ಲಿ, ಕೇಂದ್ರ ಸರ್ಕಾರವು ಅವಶ್ಯ ಎಂದು ಭಾವಿಸಿದರೆ, ಅಧಿಸೂಚನೆಯಲ್ಲಿ ಸ್ಪಷ್ಟಪಡಿಸುವ ಮೂಲಕ, ಶಿಕ್ಷಕರ ನೇಮಕಾತಿಗೆ ಬೇಕಾದ ಕನಿಷ್ಠ ಅರ್ಹತಾ ಷರತ್ತುಗಳನ್ನು ಐದು ವರ್ಷಗಳಿಗೆ ಮೀರದಂತಹ ಕಾಲಾವಧಿಯವರೆಗೆ ಸಡಿಲಿಸಬಹುದು.

ಆದರೆ, ಈ ಕಾಯಿದೆಯ ಪ್ರಾರಂಭಿಕ ಹಂತದಲ್ಲಿ, ಉಪಕಲಂ (1) ರಲ್ಲಿ ತಿಳಿಸಿದಂತೆ, ಯಾವ ಶಿಕ್ಷಕರು ನೇಮಕಾತಿಗೊಳ್ಳಲು ಬೇಕಾದ ಕನಿಷ್ಠ ಅರ್ಹತೆಗಳನ್ನು ಹೊಂದಿರುವುದಿಲ್ಲವೋ, ಅವರು ಐದು ವರ್ಷಗಳೊಳಗಾಗಿ ಅಂತಹ ಕನಿಷ್ಠ ಅರ್ಹತೆಗಳನ್ನು ಗಳಿಸತಕ್ಕದ್ದು.

(3) ಶಿಕ್ಷಕರಿಗೆ ನೀಡಲಾಗುವ ವೇತನ ಮತ್ತು ಇತರೆ ಭತ್ಯೆಗಳು ಹಾಗೂ ಶಿಕ್ಷಕರ ಸೇವಾ ನಿಯಮಗಳು ಮತ್ತು ಷರತ್ತುಗಳು ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದ ರೀತಿಯಲ್ಲಿ ಇರತಕ್ಕದ್ದು.

**ಕಲಂ – 24 : ಶಿಕ್ಷಕರ ಕರ್ತವ್ಯಗಳು ಮತ್ತು ಅಸಮಾಧಾನಗಳ[4] ನಿವಾರಣೆ**

(1) ಕಲಂ 23 ರ ಉಪಕಲಂ (1) ರಲ್ಲಿ ನೇಮಕಗೊಂಡ ಶಿಕ್ಷಕರು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:

(a) ನಿಯಮಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗಬೇಕು;

(b) ಕಲಂ 29 ರ ಉಪಕಲಂ (2) ರಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ಸೂಚಿಸಲಾದ ಪಠ್ಯವಿಷಯಗಳನ್ನು ನಡೆಸಬೇಕು ಹಾಗೂ ಪೂರ್ತಿಗೊಳಿಸಬೇಕು;

(c) ನಿರ್ದಿಷ್ಟಪಡಿಸಲಾದ ಕಾಲಾವಧಿಯೊಳಗೆ ಇಡೀ ಪಠ್ಯವಿಷಯಗಳನ್ನು ಪೂರ್ತಿಗೊಳಿಸಬೇಕು;

(d) ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿ, ಅವಶ್ಯವಿದ್ದಲ್ಲಿ, ಹೆಚ್ಚಿನ ಸಲಹೆ ಸೂಚನೆಗಳನ್ನು ನೀಡಬೇಕು;

(e) ಮಕ್ಕಳ ಪೋಷಕರು ಮತ್ತು ಪಾಲಕರೊಂದಿಗೆ ನಿಯಮಿತವಾಗಿ ಸಭೆ ನಡೆಸಿ, ಅವರಿಗೆ ಅವರ ಮಕ್ಕಳ ನಿಯಮಿತ ಹಾಜರಾತಿ, ಕಲಿಕಾ ಸಾಮರ್ಥ್ಯ, ಕಲಿಕಾ ಪ್ರಗತಿ ಮತ್ತು ಮಗುವಿಗೆ ಕುರಿತಾದ ಇನ್ನಾವುದೇ ಮಾಹಿತಿಯನ್ನು ತಿಳಿಯಪಡಿಸಬೇಕು; ಮತ್ತು

(f) ವಿಧಿಸಬಹುದಾದ ಇನ್ನಾವುದೇ ಕರ್ತವ್ಯಗಳ ನಿರ್ವಹಣೆ.

(2) ಉಪಕಲಂ (1) ರಲ್ಲಿ ಸ್ಪಷ್ಟಪಡಿಸಲಾದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಲೋಪವೆಸಗುವ ಶಿಕ್ಷಕ/ಶಿಕ್ಷಕಿ, ಅವನಿಗೆ/ಳಿಗೆ ಅನ್ವಯಿಸುವಂತಹ ಸೇವಾನಿಯಮಗಳಡಿಯಲ್ಲಿ ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮಗಳಿಗೆ ಗುರಿಯಾಗುತ್ತಾನೆ/ಳೆ.
ಆದರೆ, ಅಂತಹ ಶಿಸ್ತು ಕ್ರಮಗಳನ್ನು ಕೈಗೊಳ್ಳುವ ಮುನ್ನ, ಆ ಶಿಕ್ಷಕನಿಗೆ/ಶಿಕ್ಷಕಿಗೆ, ಅವನ/ಅವಳ ಅಹವಾಲನ್ನು ಹೇಳಿಕೊಳ್ಳಲು ಯಥೋಚಿತ ಅವಕಾಶವನ್ನು ನೀಡತಕ್ಕದ್ದು.

(3) ಶಿಕ್ಷಕರಿಗೆ ಏನಾದರೂ ಅಸಮಾಧಾನಗಳು ಇದ್ದಲ್ಲಿ, ವಿಧಿಸಬಹುದಾದ ರೀತಿಯಲ್ಲಿ ಅವನ್ನು ನಿವಾರಿಸತಕ್ಕದ್ದು.

**ಕಲಂ – 25 : ವಿದ್ಯಾರ್ಥಿ – ಶಿಕ್ಷಕ ಅನುಪಾತ**

(1) ಈ ಕಾಯಿದೆಯು ಪ್ರಾರಂಭವಾದ ದಿನಾಂಕದಿಂದ 6 ತಿಂಗಳೊಳಗಾಗಿ, ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು, ಪ್ರತೀ ಶಾಲೆಯಲ್ಲಿಯೂ ವಿದ್ಯಾರ್ಥಿ–ಶಿಕ್ಷಕ ಅನುಪಾತವು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು.

(2) ಉಪಕಲಂ (1) ರಡಿಯಲ್ಲಿ ತಿಳಿಸಿರುವಂತೆ, ವಿದ್ಯಾರ್ಥಿ–ಅಧ್ಯಾಪಕ ಅನುಪಾತವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಶಾಲೆಯೊಂದರಲ್ಲಿ ನೇಮಕಗೊಂಡ ಯಾವುದೇ ಶಿಕ್ಷಕರನ್ನು ಬೇರಿನ್ನಾವುದೇ ಶಾಲೆಯಲ್ಲಿ ಅಥವಾ ಕಛೇರಿಯಲ್ಲಿ ಸೇವೆ ಸಲ್ಲಿಸುವಂತೆ ಅಥವಾ ಕಲಂ 27 ರಲ್ಲಿ ಸ್ಪಷ್ಟಪಡಿಸಿದ ಕಾರಣಗಳನ್ನು ಹೊರತುಪಡಿಸಿ, ಇನ್ನಾವುದೇ ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಅಭಿನಿಯೋಜನೆ[5] ಮಾಡತಕ್ಕದ್ದಲ್ಲ.

**ಕಲಂ – 26 : ತೆರವಾಗಿರುವ ಶಿಕ್ಷಕ ಹುದ್ದೆಗಳನ್ನು ಭರ್ತಿಗೊಳಿಸುವಿಕೆ**

ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟ, ಸ್ವಾಮ್ಯತ್ವಕ್ಕೊಳಪಟ್ಟಿರುವ, ಅಧೀನದಲ್ಲಿರುವ ಅಥವಾ ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಆರ್ಥಿಕ ನೆರವನ್ನು ದೇಣಿಗೆಯಾಗಿ ಪಡೆದಿರುವ ಶಾಲೆಗಳಿಗೆ ಸಂಬಂಧಿಸಿದಂತೆ, ನೇಮಕಾತಿ ಪ್ರಾಧಿಕಾರವು, ತನ್ನ ನಿಯಂತ್ರಣದಲ್ಲಿರುವ ಶಾಲೆಗಳಲ್ಲಿ ತೆರವಾಗಿರುವ ಶಿಕ್ಷಕರ ಹುದ್ದೆಗಳು ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆಯ ಹತ್ತು ಶೇಕಡಾವನ್ನು ಮೀರದಂತೆ ಖಚಿತಪಡಿಸಿಕೊಳ್ಳತಕ್ಕದ್ದು.

**ಕಲಂ – 27 : ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಶಿಕ್ಷಕರ ಅಭಿನಿಯೋಜನೆಯ ನಿಷೇಧ**

---

[4] ಅಸಮಾಧಾನಗಳು ಎಂಬುದು "grievances" ಎಂಬ ಪದದ ಅನುವಾದವಾಗಿದ್ದು, ಇದಕ್ಕೆ, ಕುಂದುಕೊರತೆ, ವ್ಯಥೆ, ಅಸಮಾಧಾನ ಕಾರಣಗಳು ಎಂಬ ಅರ್ಥಗಳೂ ಇವೆ. ಇದನ್ನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರವು ಡಿಸೆಂಬರ್ 2008 ರಲ್ಲಿ ಪ್ರಕಟಿಸಿದ ಕಾನೂನು ಪದಕೋಶದಿಂದ ಆರಿಸಿಕೊಳ್ಳಲಾಗಿದ್ದು, ಸಂದರ್ಭಕ್ಕೆ ತಕ್ಕಂತೆ, ಇದರ ಇತರ ಅರ್ಥಗಳನ್ನೂ ಬಳಸಿಕೊಳ್ಳಲಾಗಿದೆ.

[5] ಅಭಿನಿಯೋಜನೆ ಎಂಬುದು "deploy" ಎಂಬ ಪದದ ಅನುವಾದ. ಆಕರ : ಕಾನೂನು ಪದಕೋಶ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ, ಡಿಸೆಂಬರ್ 2008 ರ ಆವೃತ್ತಿ.

ಯಾವ ಶಿಕ್ಷಕರನ್ನೂ, ದಶವಾರ್ಷಿಕ ಜನಗಣತಿ, ವಿಕೋಪ ಪರಿಹಾರ ಕರ್ತವ್ಯಗಳು ಅಥವಾ ಸ್ಥಳೀಯ ಪ್ರಾಧಿಕಾರ ಯಾ ರಾಜ್ಯ ಶಾಸಕಸಭೆಗಳು ಯಾ ಸಂಸತ್ ಚುನಾವಣೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೊರತುಪಡಿಸಿ, ಇತರ ಯಾವುದೇ ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಅಭಿನಿಯೋಜನೆ ಮಾಡತಕ್ಕದ್ದಲ್ಲ.

**ಕಲಂ – 28 : ಶಿಕ್ಷಕರ ಖಾಸಗೀ ಪಾಠ ಹೇಳುವಿಕೆಯ ನಿಷೇಧ**

ಯಾವುದೇ ಶಿಕ್ಷಕರು ಖಾಸಗೀ ಪಾಠಗಳನ್ನು ಮಾಡುವುದು, ಖಾಸಗಿಯಾಗಿ ಕಲಿಸುವುದರಲ್ಲಿ ನಿರತರಾಗಬಾರದು.

## ಅಧ್ಯಾಯ – ೫
## ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಿಕೆ

**ಕಲಂ – 29 : ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನ**

(1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನಗಳನ್ನು ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಸ್ಪಷ್ಟಪಡಿಸಬಹುದಾದ ಶಿಕ್ಷಣ ಪ್ರಾಧಿಕಾರವು ನಿರ್ಧರಿಸತಕ್ಕದ್ದು.

(2) ಶಿಕ್ಷಣ ಪ್ರಾಧಿಕಾರವು ಉಪಕಲಂ (1) ರಲ್ಲಿ ತಿಳಿಸಿದಂತೆ ಪಠ್ಯಕ್ರಮ ಹಾಗೂ ಮೌಲ್ಯಮಾಪನ ವಿಧಾನಗಳನ್ನು ನಿರ್ಧರಿಸುವಾಗ ಕೆಳಕಂಡ ವಿಷಯಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು. ಅವುಗಳೆಂದರೆ –

- (a) ಸಂವಿಧಾನದಲ್ಲಿ ಅಳವಡಿಸಲಾಗಿರುವ ಮೌಲ್ಯಗಳಿಗೆ ಅನುಗುಣವಾಗಿರುವುದು;
- (b) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ;
- (c) ಮಕ್ಕಳ ಜ್ಞಾನ, ಸಾಮರ್ಥ್ಯ ಹಾಗೂ ಪ್ರತಿಭೆಗಳ ಬೆಳವಣಿಗೆ;
- (d) ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದ ಪರಿಪೂರ್ಣ ಬೆಳವಣಿಗೆ;
- (e) ಮಗು ಸ್ನೇಹಿ ಮತ್ತು ಮಗು ಕೇಂದ್ರಿತ ರೀತಿಯಲ್ಲಿ ಚಟುವಟಿಕೆಗಳು, ಅನ್ವೇಷಣೆ ಹಾಗೂ ಕಂಡುಕೊಳ್ಳುವಿಕೆಗಳ ಮೂಲಕ ಕಲಿಯುವಿಕೆ;
- (f) ಬೋಧನಾ ಮಾಧ್ಯಮ ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು;
- (g) ಮಕ್ಕಳನ್ನು ಭಯ, ಮಾನಸಿಕ ನೋವು ಹಾಗೂ ಆತಂಕ ಮುಕ್ತರನ್ನಾಗಿಸುವುದು ಮತ್ತು ಮಗುವಿಗೆ ತನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯ ಮಾಡುವುದು;
- (h) ಮಗುವಿನ ಜ್ಞಾನದ ಅರ್ಥೈಸಿಕೊಳ್ಳುವಿಕೆಯನ್ನು ಮತ್ತು ಅರ್ಥೈಸಿಕೊಂಡದ್ದನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯಗಳ ಸಮಗ್ರ ಹಾಗೂ ನಿರಂತರ ಮೌಲ್ಯಮಾಪನ.

**ಕಲಂ – 30 : ಪರೀಕ್ಷೆ ಮತ್ತು ಪೂರ್ಣಗೊಳಿಸುವಿಕೆಯ ಪ್ರಮಾಣ ಪತ್ರ**

(1) ಯಾವುದೇ ಮಗು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವತನಕ ಯಾವುದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾದ/ಳಾಗಬೇಕಾದ ಅವಶ್ಯಕತೆಯಿಲ್ಲ.

(2) ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿದ ಪ್ರತಿ ಮಗುವಿಗೂ ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದ ರೂಪದಲ್ಲಿ ಹಾಗೂ ಕ್ರಮದಲ್ಲಿ ಪ್ರಮಾಣ ಪತ್ರ ಕೊಡತಕ್ಕದ್ದು.

## ಅಧ್ಯಾಯ – ೬
## ಮಕ್ಕಳ ಹಕ್ಕು ರಕ್ಷಣೆ

**ಕಲಂ – 31 : ಮಗುವಿನ ಶಿಕ್ಷಣದ ಹಕ್ಕಿನ ಮೇಲ್ವಿಚಾರಣೆ**

(1) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆ 2005 ರ ಕಲಂ 3 ರಡಿಯಲ್ಲಿ ರಚಿಸಲಾಗಿರುವ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಕಲಂ 17 ರಡಿಯಲ್ಲಿ ರಚಿಸಲಾಗಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು, ತಮಗೆ ಆ ಕಾಯಿದೆಯಡಿಯಲ್ಲಿ ನೀಡಲಾಗಿರುವ ಕಾರ್ಯಗಳೊಂದಿಗೆ ಈ ಕೆಳಕಂಡ ಕಾರ್ಯಗಳನ್ನೂ ನಿರ್ವಹಿಸತಕ್ಕದ್ದು:

(a) ಈ ಕಾಯಿದೆಯಲ್ಲಿ ಒದಗಿಸಲಾದ ಹಕ್ಕುಗಳ ಸಂರಕ್ಷಣೆಯ ವಿಧಾನಗಳನ್ನು ಪರೀಕ್ಷಿಸುವುದು ಮತ್ತು ಪುನರಾವಲೋಕನ ಮಾಡುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಅಗತ್ಯವಾದ ಕ್ರಮಗಳನ್ನು ಶಿಫಾರಸು ಮಾಡುವುದು.

(b) ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿಗೆ ಸಂಬಂಧಿಸಿದಂತೆ ಇರುವ ದೂರುಗಳ ವಿಚಾರಣೆ; ಮತ್ತು

(c) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆಯ ಕಲಂ 15 ಮತ್ತು 24 ರಲ್ಲಿ ಸೂಚಿಸಿರುವಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

(2) ಮೇಲೆ ಹೇಳಲಾದ ಆಯೋಗಗಳು, ಉಪಕಲಂ (1) ರ ಖಂಡ (c) ಯ ಅಡಿಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಾಗ, ಅವುಗಳಿಗೆ (ಆಯೋಗಗಳಿಗೆ) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆಯ ಕಲಂ 14 ಮತ್ತು 24 ರಡಿಯಲ್ಲಿ ಅನುಕ್ರಮವಾಗಿ ಕೊಡಲಾಗಿರುವಂತಹುದೇ ಅಧಿಕಾರವನ್ನು ಹೊಂದಿರುತ್ತವೆ.

(3) ರಾಜ್ಯವೊಂದರಲ್ಲಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರಚಿಸದೇ ಇದ್ದಂತಹ ಸಂದರ್ಭದಲ್ಲಿ, ಸಮುಚಿತ ಸರ್ಕಾರವು, ಮೇಲಿನ ಉಪಕಲಂ (1) ರ ಖಂಡ (a) ಯಿಂದ (c) ಯವರೆಗೆ, ನಿರ್ದಿಷ್ಟವಾಗಿ ನಮೂದಿಸಲಾಗಿರುವ ಕಾರ್ಯಗಳನ್ನು ನಿರ್ವಹಿಸಲು, ವಿಧಿಸಬಹುದಾದ ರೀತಿಯ ಷರತ್ತುಗಳು ಮತ್ತು ನಿಯಮಗಳಿಗನುಸಾರವಾಗಿ ಪ್ರಾಧಿಕಾರವನ್ನು ರಚಿಸಬಹುದು.

**ಕಲಂ – 32 : ಅಸಮಾಧಾನ ಕಾರಣಗಳ ನಿವಾರಣೆ**

(1) ಉಪಕಲಂ 31 ಏನನ್ನೇ ಒಳಗೊಂಡಿದ್ದರೂ, ಯಾವುದೇ ವ್ಯಕ್ತಿ ಈ ಕಾಯಿದೆಯಡಿಯಲ್ಲಿ ಮಗುವಿನ ಹಕ್ಕಿಗೆ ಸಂಬಂಧಿಸಿದಂತೆ ಏನೇ ಅಸಮಾಧಾನ, ಕುಂದುಕೊರತೆಗಳ ಸಮಸ್ಯೆ ಹೊಂದಿದ್ದರೂ, ಅದರ ಕುರಿತು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರಕ್ಕೆ ಲಿಖಿತ ದೂರನ್ನು ಕೊಡಬಹುದು.

(2) ಉಪಕಲಂ (1) ರಡಿಯಲ್ಲಿ ದೂರನ್ನು ಸ್ವೀಕರಿಸಿದ ಬಳಿಕ ಸ್ಥಳೀಯ ಪ್ರಾಧಿಕಾರವು ಸಂಬಂಧಿಸಿದ ವ್ಯಕ್ತಿಗಳಿಗೆ ಅವರ ಅಹವಾಲನ್ನು ಹೇಳಿಕೊಳ್ಳಲು ಯಥೋಚಿತವಾದ ಅವಕಾಶವನ್ನು ಕೊಟ್ಟು, ಮೂರು ತಿಂಗಳುಗಳೊಳಗಾಗಿ ಆ ವಿಷಯವನ್ನು ತೀರ್ಮಾನಿಸತಕ್ಕದ್ದು.

(3) ಸ್ಥಳೀಯ ಪ್ರಾಧಿಕಾರವು ನೀಡಿದ ತೀರ್ಪಿನ ಬಗ್ಗೆ ಅಸಮಾಧಾನವಿರುವ ಯಾವುದೇ ವ್ಯಕ್ತಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಕಲಂ 31 ರ ಉಪಕಲಂ (3) ರಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಬಹುದು.

(4) ಉಪಕಲಂ (3) ರಡಿಯಲ್ಲಿ ಸಲ್ಲಿಸಲಾದ ಮೇಲ್ಮನವಿಯನ್ನು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಕಲಂ 31 ರ ಉಪಕಲಂ (3) ರಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರವು ಕಲಂ 31 ರ ಉಪಕಲಂ (1) ರ ಖಂಡ (c) ಯ ಅಡಿಯಲ್ಲಿ ತಿಳಿಸಲಾದಂತೆ ತೀರ್ಮಾನಿಸತಕ್ಕದ್ದು.

**ಕಲಂ – 33 : ರಾಷ್ಟ್ರೀಯ ಸಲಹಾ ಮಂಡಳಿಯ ರಚನೆ**

(1) ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ಆವಶ್ಯ ಎಂದು ಭಾವಿಸುವ ಸಂಖ್ಯೆಯ ಸದಸ್ಯರುಳ್ಳ, ಆದರೆ, 15 ಜನ ಸದಸ್ಯರ ಮಿತಿಯನ್ನು ಮೀರದ ರಾಷ್ಟ್ರೀಯ ಸಲಹಾ ಮಂಡಳಿಯನ್ನು ರಚಿಸತಕ್ಕದ್ದು. ಹೀಗೆ ಒಳಗೊಳ್ಳತಕ್ಕ ಸದಸ್ಯರನ್ನು ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಕಾರ್ಯ ನಿರ್ವಹಿಸಿರುವ ಅನುಭವವಿರುವ ವ್ಯಕ್ತಿಗಳ ಸಮೂಹದಿಂದ ನೇಮಿಸಿಕೊಳ್ಳತಕ್ಕದ್ದು.

(2) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೇಂದ್ರಸರ್ಕಾರಕ್ಕೆ ಸಲಹೆ ನೀಡುವುದು ರಾಷ್ಟ್ರೀಯ ಸಲಹಾ ಮಂಡಳಿಯ ಕಾರ್ಯವಾಗಿದೆ.

(3) ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಗೆ ಸಂಬಂಧಿಸಿದ ಇತರೆ ಷರತ್ತುಗಳು ಹಾಗೂ ನಿಯಮಗಳು ಈ ಕಾಯಿದೆಯಲ್ಲಿ ವಿಧಿಸಬಹುದಾದಂತಿರುತ್ತವೆ.

**ಕಲಂ – 34 : ರಾಜ್ಯ ಸಲಹಾ ಮಂಡಳಿಯ ರಚನೆ**

(1) ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ಆವಶ್ಯ ಎಂದು ಭಾವಿಸುವ ಸಂಖ್ಯೆಯ ಸದಸ್ಯರುಳ್ಳ, ಆದರೆ, 15 ಜನ ಸದಸ್ಯರ ಮಿತಿಯನ್ನು ಮೀರದ ರಾಜ್ಯ ಸಲಹಾ ಮಂಡಳಿಯನ್ನು ರಚಿಸತಕ್ಕದ್ದು.

ಹೀಗೆ ಒಳಗೊಳ್ಳತಕ್ಕ ಸದಸ್ಯರನ್ನು ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಕಾರ್ಯ ನಿರ್ವಹಿಸಿರುವ ಅನುಭವವಿರುವ ವ್ಯಕ್ತಿಗಳ ಸಮೂಹದಿಂದ ನೇಮಿಸಿಕೊಳ್ಳತಕ್ಕದ್ದು.

(2) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಸರ್ಕಾರಕ್ಕೆ ಸಲಹೆ ನೀಡುವುದು ರಾಜ್ಯ ಸಲಹಾ ಮಂಡಳಿಯ ಕಾರ್ಯವಾಗಿದೆ.

(3) ರಾಜ್ಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಗೆ ಸಂಬಂಧಿಸಿದ ಇತರೆ ಷರತ್ತುಗಳು ಹಾಗೂ ನಿಯಮಗಳು ಈ ಕಾಯಿದೆಯಲ್ಲಿ ವಿಧಿಸಬಹುದಾದಂತಿರುತ್ತವೆ.

## ಅಧ್ಯಾಯ – ೭
## ಇತರೆ ವಿಚಾರಗಳು

**ಕಲಂ – 35 : ನಿರ್ದೇಶನಗಳನ್ನು ನೀಡುವ ಅಧಿಕಾರ**

(1) ಈ ಕಾಯಿದೆಯ ಉಪಬಂಧಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ತನಗೆ ಸೂಕ್ತವೆನಿಸಿದ ಮಾರ್ಗದರ್ಶನಗಳನ್ನು ಸಂದರ್ಭಾನುಸಾರವಾಗಿ, ಸಮುಚಿತ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ನೀಡಬಹುದಾಗಿದೆ.

(2) ಸಮುಚಿತ ಸರ್ಕಾರವು ಈ ಕಾಯಿದೆಯ ಉಪಬಂಧಗಳ ಅನುಷ್ಠಾನಕ್ಕಾಗಿ, ತನಗೆ ಸೂಕ್ತವೆನಿಸಿದ ಮಾರ್ಗದರ್ಶನಗಳು ಮತ್ತು ಇತರ ನಿರ್ದೇಶನಗಳನ್ನು ಸ್ಥಳೀಯ ಪ್ರಾಧಿಕಾರ ಅಥವಾ ಶಾಲಾ ನಿರ್ವಹಣಾ ಸಮಿತಿಗೆ ನೀಡಬಹುದಾಗಿದೆ.

(3) ಸ್ಥಳೀಯ ಪ್ರಾಧಿಕಾರವು ಈ ಕಾಯಿದೆಯಲ್ಲಿನ ಉಪಬಂಧಗಳ ಅನುಷ್ಠಾನದ ಕುರಿತಾಗಿ ತನಗೆ ಸೂಕ್ತವೆನಿಸಿದ ಮಾರ್ಗದರ್ಶನಗಳು ಮತ್ತು ನಿರ್ದೇಶನಗಳನ್ನು ಶಾಲಾ ನಿರ್ವಹಣಾ ಸಮಿತಿಗೆ ನೀಡಬಹುದಾಗಿದೆ.

**ಕಲಂ – 36 : ಕಾನೂನು ಕ್ರಮ ಜರುಗಿಸಲು[6] ಪೂರ್ವ ಮಂಜೂರಾತಿ**

ಕಲಂ 13 ರ ಉಪಕಲಂ (2), ಕಲಂ 18 ರ ಉಪಕಲಂ (5) ಮತ್ತು ಕಲಂ 19 ರ ಉಪಕಲಂ (5) ರಡಿಯಲ್ಲಿ ಶಿಕ್ಷೆ ವಿಧಿಸಬಹುದಾದ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಬಗ್ಗೆ ಸಮುಚಿತ ಸರ್ಕಾರದ ಅಧಿಸೂಚನೆ ಮೂಲಕ ಅಧಿಕಾರ ಹೊಂದಿರುವ ಅಧಿಕಾರಿಯಿಂದ ಪೂರ್ವ ಮಂಜೂರಾತಿ ಪಡೆಯದ ಹೊರತು ಯಾವುದೇ ಕಾನೂನು ಕ್ರಮ ಜರುಗಿಸುವಂತಿಲ್ಲ.

**ಕಲಂ – 37 : ಸದ್ಭಾವನೆಯಿಂದ ಕೈಗೊಂಡ ಕ್ರಮಗಳ ಸಂರಕ್ಷಣೆ**

ಈ ಕಾಯಿದೆಯ ಅಥವಾ ಈ ಕಾಯಿದೆಯಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶಗಳ ಅನುಸರಣೆಯ ಸಂದರ್ಭದಲ್ಲಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ಥಳೀಯ ಪ್ರಾಧಿಕಾರ, ಶಾಲಾ ನಿರ್ವಹಣಾ ಸಮಿತಿ ಅಥವಾ ಯಾವುದೇ ವ್ಯಕ್ತಿ ಸದ್ಭಾವನೆಯಿಂದ ಮಾಡಿರುವ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಯಾವುದೇ ದಾವೆ ಹೂಡುವಂತಿಲ್ಲ ಅಥವಾ ಕಾನೂನು ವ್ಯವಹರಣೆ[7]ಗಳನ್ನು ಜರುಗಿಸುವಂತಿಲ್ಲ.

**ಕಲಂ – 38 : ನಿಯಮಗಳನ್ನು ರೂಪಿಸಲು ಸಮುಚಿತ ಸರ್ಕಾರಕ್ಕಿರುವ ಅಧಿಕಾರ**

(1) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಕಾರ್ಯಗತಗೊಳಿಸಲು, ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ ನಿಯಮಗಳನ್ನು ರೂಪಿಸಬಹುದು.

---

[6] "Prosecution" ಎಂಬ ಪದಕ್ಕೆ ಕಾನೂನು ಕ್ರಮ ಜರುಗಿಸು, ಕಟ್ಟಳೆ ನಡೆಸುವುದು, ಪ್ರಾಸಿಕ್ಯೂಷನ್ ಎಂಬ ಅರ್ಥಗಳಿದ್ದು, ಹೆಚ್ಚಿನ ವಿವರಗಳಿಗೆ ಮೈಸೂರು ವಿಶ್ವವಿದ್ಯಾನಿಲಯ 1999 ರಲ್ಲಿ ಪ್ರಕಟಿಸಿದ ಇಂಗ್ಲೀಷ್–ಕನ್ನಡ ನಿಘಂಟಿನ ಪು.ಸಂ. 732 ನ್ನು ಪರಿಶೀಲಿಸಬಹುದು.

[7] "Legal proceeding" ಎಂಬುದರ ಅರ್ಥ. ಇದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಪ್ರಕಟಿಸಿದ ಡಿಸೆಂಬರ್ 2008 ರ ಆವೃತ್ತಿಯ ಕಾನೂನು ಪದಕೋಶದಿಂದ ತೆಗೆದುಕೊಳ್ಳಲಾಗಿದೆ.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧೆ ಬಾರದಂತೆ[8], ಅಂತಹ ನಿಯಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಅವಕಾಶ ಒದಗಿಸಬಹುದು:

(a) ಕಲಂ 4 ಕ್ಕೆ ನೀಡಲಾದ ಮೊದಲ ಪರಂತುಕ[9]ದಡಿಯಲ್ಲಿರುವಂತೆ, ವಿಶೇಷ ತರಬೇತಿಯನ್ನು ನೀಡುವ ರೀತಿ ಮತ್ತು ಅದಕ್ಕೆ ನಿಗದಿಪಡಿಸಬಹುದಾದ ಕಾಲ ಯಾ ಸಮಯದ ಮಿತಿ;

(b) ಕಲಂ 6 ರಡಿಯಲ್ಲಿ – ಆಸುಪಾಸಿನ ಶಾಲೆಗಳನ್ನು ಸ್ಥಾಪಿಸಬೇಕಾದ ಪ್ರದೇಶ ಅಥವಾ ಪರಿಮಿತಿ;

(c) ಕಲಂ 9 ರ ಖಂಡ (d) ಯಡಿಯಲ್ಲಿ ನಮೂದಿಸಲಾದಂತೆ 14 ವರ್ಷ ವಯೋಮಿತಿಯೊಳಗಿನ ಮಕ್ಕಳ ದಾಖಲೆಗಳ ನಿರ್ವಹಣಾ ಕ್ರಮ;

(d) ಕಲಂ 14 ರ ಉಪಕಲಂ (2) ರಡಿಯಲ್ಲಿನ, ವೆಚ್ಚ ತುಂಬಿ ಕೊಡುವ ವಿಧಾನ ಮತ್ತು ಮಿತಿ;

(e) ಕಲಂ 14 ರ ಉಪಕಲಂ (1) ರಡಿಯಲ್ಲಿ ಮಗುವಿನ ವಯಸ್ಸನ್ನು ನಿರ್ಣಯಿಸುವ ಯಾವುದೇ ಇತರ ದಾಖಲೆ;

(f) ಕಲಂ 15 ರಡಿಯಲ್ಲಿನ, ದಾಖಲಾತಿಯ ಸಮಯದ ವಿಸ್ತರಣೆ ಮತ್ತು ವಿಸ್ತರಿಸಿದ ಸಮಯಾವಧಿಯ ಬಳಿಕ ಶಾಲೆಗೆ ದಾಖಲಾಗಿದ್ದಲ್ಲಿ ಅಂತಹವರು ಅಧ್ಯಯನ ಪೂರ್ಣಗೊಳಿಸಬೇಕಾದ ರೀತಿ;

(g) ಕಲಂ 18 ರ ಉಪಕಲಂ (1) ರಡಿಯಲ್ಲಿ ಮನ್ನಣೆ ಪತ್ರಕ್ಕಾಗಿ ಹಾಕಬೇಕಾದ ಅರ್ಜಿಯ ನಮೂನೆ ಮತ್ತು ಕ್ರಮ ಹಾಗೂ ಅರ್ಜಿಪತ್ರ ಸಲ್ಲಿಸಬೇಕಾದಂತಹ ಪ್ರಾಧಿಕಾರ;

(h) ಕಲಂ 18 ರ ಉಪಕಲಂ (2) ರಡಿಯಲ್ಲಿ ಮನ್ನಣೆ ಪತ್ರವನ್ನು ನೀಡಲು ಅನುಸರಿಸಬೇಕಾದ ನಮೂನೆ, ರೀತಿ, ಷರತ್ತುಗಳು ಮತ್ತು ಮನ್ನಣೆ ಪತ್ರ ಕೊಡಲು ನೀಡಲಾದ ಅವಧಿ;

(i) ಕಲಂ 18 ರ ಉಪಕಲಂ (3) ಕ್ಕೆ ನೀಡಲಾದ 2 ನೇ ಪರಂತುಕದ ಅಡಿಯಲ್ಲಿ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಲಾಗುವ ಕ್ರಮ;

(j) ಕಲಂ 21 ರ ಉಪಕಲಂ (2) ರ ಖಂಡ (d) ಯಡಿಯಲ್ಲಿ ಶಾಲಾ ನಿರ್ವಹಣಾ ಸಮಿತಿ ಮಾಡಬೇಕಾಗಬಹುದಾದ ಇತರ ಕಾರ್ಯಗಳು;

(k) ಕಲಂ 22 ರ ಉಪಕಲಂ (1) ರಡಿಯಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಬೇಕಾದ ರೀತಿ;

(l) ಕಲಂ 23 ರ ಉಪಕಲಂ (3) ರಡಿಯಲ್ಲಿ ಶಿಕ್ಷಕರಿಗೆ ನೀಡಬೇಕಾಗುವ ವೇತನ ಹಾಗೂ ಭತ್ಯೆಗಳು ಮತ್ತು ಸೇವಾ ನಿಯಮಗಳು ಹಾಗೂ ಷರತ್ತುಗಳು;

(m) ಕಲಂ 24 ರ ಉಪಕಲಂ (1) ರ ಖಂಡ (f) ಅಡಿಯಲ್ಲಿ ಶಿಕ್ಷಕರು ನಿರ್ವಹಿಸಬೇಕಾದಂತಹ ಕರ್ತವ್ಯಗಳು;

(n) ಕಲಂ 24 ರ ಉಪಕಲಂ (3) ರಡಿಯಲ್ಲಿ ಶಿಕ್ಷಕರ ಅಸಮಾಧಾನಗಳು ಅಥವಾ ಕುಂದುಕೊರತೆಗಳನ್ನು ನಿವಾರಿಸುವ ರೀತಿ;

(o) ಕಲಂ 30 ರ ಉಪಕಲಂ (2) ರಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿದ್ದಕ್ಕೆ ನೀಡಬೇಕಾದ ಪ್ರಮಾಣ ಪತ್ರದ ನಮೂನೆ ಮತ್ತು ಕ್ರಮ;

(p) ಕಲಂ 31 ರ ಉಪಕಲಂ (3) ರಡಿಯಲ್ಲಿ ರಚಿಸಬಹುದಾದ ಪ್ರಾಧಿಕಾರ, ಅದನ್ನು ರಚಿಸಲು ಅನುಸರಿಸಬೇಕಾದ ರೀತಿ ಮತ್ತು ನಿಯಮಗಳು ಹಾಗೂ ಷರತ್ತುಗಳು;

(q) ಕಲಂ 33 ರ ಉಪಕಲಂ (3) ರಡಿಯಲ್ಲಿ, ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಯ ಇತರೆ ನಿಯಮಗಳು ಮತ್ತು ಷರತ್ತುಗಳು;

(r) ಕಲಂ 34 ರ ಉಪಕಲಂ (3) ರಡಿಯಲ್ಲಿ, ರಾಜ್ಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಯ ಇತರೆ ನಿಯಮಗಳು ಮತ್ತು ಷರತ್ತುಗಳು.

(3) ಈ ಕಾಯಿದೆಯಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು ಮತ್ತು ಕಲಂ 20 ಹಾಗೂ 23 ರಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನೂ, ಮಾಡಲಾದ ಯಾ ಹೊರಡಿಸಿದ ಬಳಿಕ,

---

[8] "In particular, and without prejudice to the generality of the foregoing powers" ಎಂಬುದರ ಅನುವಾದ. ಇದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಪ್ರಕಟಿಸಿದ ಡಿಸೆಂಬರ್ 2008 ರ ಆವೃತ್ತಿಯ ಕಾನೂನು ಪದಕೋಶದಿಂದ ಬಳಸಿಕೊಳ್ಳಲಾಗಿದೆ.

[9] Proviso - ಪರಂತುಕ (ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಪ್ರಕಟಿಸಿದ ಡಿಸೆಂಬರ್ 2008 ರ ಆವೃತ್ತಿಯ ಕಾನೂನು ಪದಕೋಶದಿಂದ ತೆಗೆದುಕೊಳ್ಳಲಾಗಿದೆ) ಅಥವಾ ದಸ್ತೈವಾಜಿನಲ್ಲಿರುವ ವಿಧಿಯನ್ನು ಯಾ ಮಿತಿಯನ್ನು ನಿರ್ದೇಶಿಸುವ ವಾಕ್ಯ ಎಂಬ ವಿವರಣೆ ಮೈಸೂರು ವಿಶ್ವವಿದ್ಯಾನಿಲಯ 1999 ರಲ್ಲಿ ಪ್ರಕಟಿಸಿದ ಇಂಗ್ಲೀಷ್–ಕನ್ನಡ ನಿಘಂಟಿನ ಪು.ಸಂ. 735 ರಲ್ಲಿದೆ.

ಸಾಧ್ಯವಾಗಬಹುದಾದಷ್ಟೂ ಬೇಗನೆ ಸಂಸತ್ತಿನ ಪ್ರತಿಯೊಂದು ಮನೆಯು (ರಾಜ್ಯಸಭೆ ಮತ್ತು ಲೋಕಸಭೆ) ಒಟ್ಟು 30 ದಿನಗಳನ್ನೊಳಗೊಳ್ಳಬಹುದಾದ ಒಂದು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿರುವಾಗ, ಅವುಗಳೆದುರು ಮಂಡಿಸತಕ್ಕದ್ದು. ಹೀಗೆ ಮಂಡಿಸಿದಾಗ, ಒಂದು ಪಕ್ಷ, ಸಂಸತ್ತಿನ ಎರಡೂ ಮನೆಗಳು, ಮೇಲೆ ತಿಳಿಸಲಾದಂತಹ ಯಾವುದಾದರೂ ಒಂದು ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯಗೊಳ್ಳುವುದರೊಳಗಾಗಿ,

- ಮಂಡಿಸಲಾದಂತಹ ನಿಯಮ ಯಾ ಅಧಿಸೂಚನೆಯಲ್ಲಿ ಮಾರ್ಪಾಟುಗಳನ್ನು ತರಲು ಸಮ್ಮತಿಸಿದರೆ ಅಥವಾ,
- ಅಂತಹ ನಿಯಮಗಳು ಯಾ ಅಧಿಸೂಚನೆಗಳನ್ನು ಮಾಡಬಾರದು ಅಥವಾ ಹೊರಡಿಸತಕ್ಕದ್ದಲ್ಲವೆಂದು ಒಮ್ಮತವಾಗಿ ಅಭಿಪ್ರಾಯಪಟ್ಟಲ್ಲಿ,

ಅಂತಹ ನಿಯಮಗಳು ಅಥವಾ ಅಧಿಸೂಚನೆಗಳು ಸಂದರ್ಭಕ್ಕನುಸಾರವಾಗಿ, ಆ ಬಳಿಕ, ಮಾರ್ಪಾಟಾದ ರೂಪದಲ್ಲಿ ಅಥವಾ ಶೂನ್ಯಗೊಂಡಿವೆ ಎಂದೇ ಅನುಷ್ಠಾನಗೊಳ್ಳುತ್ತವೆ. ಹಾಗಿದ್ದರೂ, ಅಂತಹ ಮಾರ್ಪಾಟುಗಳು ಅಥವಾ ಶೂನ್ಯಗೊಳಿಸುವಿಕೆ ಯಾ ರದ್ದತಿಯು, ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಮೊದಲೇ ತೆಗೆದುಕೊಳ್ಳಲಾದ ಯಾವುದೇ ಕ್ರಮದ ಸಿಂಧುತ್ವ ಯಾ ಮಾನ್ಯತೆಗೆ ಪ್ರತಿಕೂಲ ಪ್ರಭಾವವಿಲ್ಲದಂತಾಗಿರತಕ್ಕದ್ದು.

(4) ರಾಜ್ಯ ಸರ್ಕಾರವು ಈ ಕಾಯಿದೆಯಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವನ್ನು ಅಥವಾ ಅಧಿಸೂಚನೆಯನ್ನು, ಅದನ್ನು ಮಾಡಲಾದ ಬಳಿಕ ಸಾಧ್ಯವಾಗಬಹುದಾದಷ್ಟೂ ಬೇಗನೆ ರಾಜ್ಯ ಶಾಸನಸಭೆಗಳೆದುರು ಮಂಡಿಸತಕ್ಕದ್ದು.

# ಅನುಸೂಚಿ

(ಕಲಂ 19 ಮತ್ತು 25 ನೋಡಿ)

## ಶಾಲೆ ನಡೆಸಲು ಗುಣಮಟ್ಟಗಳು ಮತ್ತು ಮಾನದಂಡಗಳು

| ಕ್ರಮ ಸಂಖ್ಯೆ | ಅಂಶಗಳು | ಗುಣಮಟ್ಟಗಳು ಮತ್ತು ಮಾನದಂಡಗಳು | |
|---|---|---|---|
| 1. | ಶಿಕ್ಷಕರ ಸಂಖ್ಯೆ | ಶಾಲೆಗೆ ಸೇರಿರುವ ಮಕ್ಕಳ ಸಂಖ್ಯೆ | ಶಿಕ್ಷಕ/ಶಿಕ್ಷಕಿಯರ ಸಂಖ್ಯೆ |
| | (a) ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ | 60 ಮಕ್ಕಳ ತನಕ | ಇಬ್ಬರು |
| | | 61 ರಿಂದ 90 | ಮೂವರು |
| | | 91 ರಿಂದ 120 | ನಾಲ್ವರು |
| | | 121 ರಿಂದ 200 | ಐವರು |
| | | 150 ಕ್ಕಿಂತ ಹೆಚ್ಚು | ಐವರು ಶಿಕ್ಷಕರು ಮತ್ತು ಒಬ್ಬ ಮುಖ್ಯ ಶಿಕ್ಷಕರು |
| | | 200 ಕ್ಕಿಂತ ಹೆಚ್ಚು | ವಿದ್ಯಾರ್ಥಿ–ಶಿಕ್ಷಕ ಅನುಪಾತ (ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ) 40 ನ್ನು ಮೀರುವಂತಿಲ್ಲ |
| | (b) ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೆ | 1) ಪ್ರತಿ ತರಗತಿಗೊಬ್ಬ ಶಿಕ್ಷಕರು, ಅಂದರೆ, ಕೆಳಕಂಡ ವಿಷಯಗಳಿಗೆ ಕೊನೇ ಪಕ್ಷ ಓರ್ವ ಶಿಕ್ಷಕ ಇರತಕ್ಕದ್ದು –<br>i) ವಿಜ್ಞಾನ ಮತ್ತು ಗಣಿತ;<br>ii) ಸಮಾಜ ಶಾಸ್ತ್ರ;<br>iii) ಭಾಷೆಗಳು.<br>2) ಪ್ರತಿ 35 ವಿದ್ಯಾರ್ಥಿಗಳಿಗೆ ಕೊನೇ ಪಕ್ಷ ಓರ್ವ ಶಿಕ್ಷಕ.<br>3) ಮಕ್ಕಳ ದಾಖಲಾತಿ 100 ಕ್ಕಿಂತಲೂ ಹೆಚ್ಚಿದ್ದಲ್ಲಿ –<br>i. ಓರ್ವ ಪೂರ್ಣಾವಧಿ ಮುಖ್ಯ ಶಿಕ್ಷಕರು<br>ii. ಕೆಳಕಂಡ ವಿಷಯಗಳಿಗೆ ಅರೆಕಾಲಿಕ ಬೋಧಕರು –<br>a) ಕಲಾ ಶಿಕ್ಷಣ;<br>b) ಆರೋಗ್ಯ ಮತ್ತು ದೈಹಿಕ ಶಿಕ್ಷಣ;<br>c) ವೃತ್ತಿ ಶಿಕ್ಷಣ. | |
| 2. | ಕಟ್ಟಡ | ಈ ಕೆಳಕಂಡವುಗಳನ್ನು ಒಳಗೊಂಡಿರುವ ಸರ್ವ ಋತು ಕಟ್ಟಡ –<br>i) ಪ್ರತಿ ಶಿಕ್ಷಕರಿಗೆ ಕನಿಷ್ಠ ಒಂದು ತರಗತಿ ಮತ್ತು ಕಛೇರಿ–ಸಂಗ್ರಹಣಾ–ಮುಖ್ಯ ಶಿಕ್ಷಕರ ಕೋಣೆ;<br>ii) ಅಡೆತಡೆಗಳಿಲ್ಲದ ಪ್ರವೇಶ ವ್ಯವಸ್ಥೆ;<br>iii) ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆ;<br>iv) ಎಲ್ಲ ಮಕ್ಕಳಿಗೆ ಕುಡಿಯಲು ಸಾಕಷ್ಟು ಸುರಕ್ಷಿತವಾದ ನೀರಿನ ವ್ಯವಸ್ಥೆ;<br>v) ಶಾಲೆಯಲ್ಲಿ ಮಧ್ಯಾಹ್ನದ ಊಟ ತಯಾರಿಸಲು ಒಂದು ಅಡುಗೆ ಕೋಣೆ;<br>vi) ಆಟದ ಮೈದಾನ;<br>vii) ಶಾಲಾ ಕಟ್ಟಡದ ಸಂರಕ್ಷಣೆಗಾಗಿ ತಡೆ ಗೋಡೆ/ಬೇಲಿ ನಿರ್ಮಾಣ ವ್ಯವಸ್ಥೆ. | |

| | | |
|---|---|---|
| 3. | ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಸಂಖ್ಯೆಯ ಶಾಲಾ ಕೆಲಸದ ದಿನಗಳು ಮತ್ತು ಬೋಧನಾ ಅವಧಿಗಳು | i) 1 ನೇ ತರಗತಿಯಿಂದ 5 ನೇ ತರಗತಿಯವರೆಗೆ 200 ಶಾಲಾ ದಿನಗಳು;<br>ii) 6 ರಿಂದ 8 ನೇ ತರಗತಿಯವರೆಗೆ 220 ಶಾಲಾ ದಿನಗಳು;<br>iii) ಶೈಕ್ಷಣಿಕ ವರ್ಷವೊಂದರಲ್ಲಿ 1 ರಿಂದ 5 ನೇ ತರಗತಿಯವರೆಗೆ 800 ಗಂಟೆಗಳ ಬೋಧನಾ ಅವಧಿಗಳು;<br>iv) ಶೈಕ್ಷಣಿಕ ವರ್ಷವೊಂದರಲ್ಲಿ 6 ರಿಂದ 8 ನೇ ತರಗತಿಯವರೆಗೆ 1000 ಗಂಟೆಗಳ ಬೋಧನಾ ಅವಧಿಗಳು. |
| 4. | ಶಿಕ್ಷಕರಿಗೆ ಪ್ರತಿ ವಾರಕ್ಕೆ ಕನಿಷ್ಠ ಕೆಲಸದ ಅವಧಿಗಳು | ತಯಾರಿ ಅವಧಿಯನ್ನೂ ಒಳಗೊಂಡಂತೆ 45 ಗಂಟೆಗಳ ಬೋಧನಾ ಅವಧಿಗಳು. |
| 5. | ಬೋಧನಾ ಮತ್ತು ಕಲಿಕಾ ಸಾಮಾಗ್ರಿ | ಪ್ರತಿ ತರಗತಿಗೂ ಅಗತ್ಯವಿದ್ದಷ್ಟು ಸರಬರಾಜು ಮಾಡತಕ್ಕದ್ದು. |
| 6. | ಗ್ರಂಥಾಲಯ | ಪ್ರತಿ ಶಾಲೆಯಲ್ಲಿಯೂ ವೃತ್ತಪತ್ರಿಕೆ, ನಿಯತಕಾಲಿಕಗಳು ಹಾಗೂ ಕಥೆ ಪುಸ್ತಕಗಳನ್ನೂ ಒಳಗೊಂಡಂತೆ, ಎಲ್ಲಾ ವಿಷಯಗಳ ಬಗೆಗಿನ ಪುಸ್ತಕಗಳನ್ನೊದಗಿಸುವಂತಹ ಗ್ರಂಥಾಲಯವಿರತಕ್ಕದ್ದು. |
| 7. | ಆಟೋಟ ಸಾಮಾಗ್ರಿಗಳು | ಪ್ರತಿ ತರಗತಿಗೂ ಅಗತ್ಯವಿದ್ದಷ್ಟು ಸರಬರಾಜು ಮಾಡತಕ್ಕದ್ದು. |

***************

**ಟಿಪ್ಪಣಿ**

ಇದು ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ ೨೦೦೯ ರ ಕನ್ನಡಾನುವಾದ ಮಾತ್ರ. ಇದು ಕಾನೂನು ದಾಖಲೆಯಲ್ಲ. ಆಂಗ್ಲ ಮೂಲದ ಆಶಯಗಳಿಗೆ ಧಕ್ಕೆ ಬರದಂತೆ ಈ ಕಾಯಿದೆಯನ್ನು ಅನುವಾದಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಕಾನೂನಿನ ವಿವಾದ/ತೊಡಕುಗಳಿದ್ದಲ್ಲಿ, ಮೂಲ ಆಂಗ್ಲ ದಾಖಲೆಯೇ ಅಂತಿಮವಾಗಿರುತ್ತದೆ.

**ಆಕರ ಗ್ರಂಥಗಳು:**

1. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ – ಕರ್ನಾಟಕ ಸರ್ಕಾರ – ಡಿಸೆಂಬರ್ 2008 ರ ಆವೃತ್ತಿಯ ಕಾನೂನು ಪದಕೋಶ.
2. ಇಂಗ್ಲೀಷ್–ಕನ್ನಡ ನಿಘಂಟು, 1999ರ ಆರನೇ ಮುದ್ರಣ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಭಾರತ ಸರ್ಕಾರ ಹೊರಡಿಸಿದ ಅಧಿಕೃತ ರಾಜ್ಯಪತ್ರದ ಇಂಗ್ಲೀಷ್ ಮೂಲ ಪ್ರತಿ.

**ಪ್ರಕಟಣೆ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು**

**ಅನುವಾದಿಸಿದವರು:** **ಕುಮಾರಿ ಜ್ಯೋತಿ ಎಸ್,** ಎಲ್ಎಲ್.ಎಂ.
# 95, 4ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ
ಸರಸ್ವತಿ ಪುರಂ, ಮೈಸೂರು – 570 009